ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 46 ನವೆಂಬರ್ 15, 1981 ಬೆಲೆ : 60 ಪೈಸೆ

ನಾಚಿಕೆಗೇಡು

ಕರ್ನಾಟಕ ಸರಕಾರ ಇತ್ತೀಚೆಗೆ ಹೊರಡಿಸಿದ ಕಾರ್ಪೊರೇಷನ್‌ಗಳಿಗೆ ಸಂಬಂಧಿಸಿದ ಸುಗ್ರೀವಾಜ್ಞೆಯು ನಮಗೆಲ್ಲಾ ನಾಚಿಕೆ ತರುವುದಾಗಿದೆ. ಬೆಂಗಳೂರು ಕಾರ್ಪೊರೇಷನ್ ರದ್ದಾಗಿ 7 ವರ್ಷವಾಯಿತು. ಇನ್ನೂ ಚುನಾವಣೆ ನಡೆದಿಲ್ಲ. ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ಗೂ ಚುನಾವಣೆ ನಡೆಯಬೇಕಾಗಿದೆ. ಸರಕಾರ ಮೈಸೂರು, ಮಂಗಳೂರು ಮುಂತಾದ ಹೊಸ ಮಹಾನಗರಗಳನ್ನು ರಚಿಸಿದೆ. ಆದರೆ ಚುನಾವಣೆಗಳನ್ನು ಮಾತ್ರ ನಡೆಸುತ್ತಿಲ್ಲ. ಇನ್ನೂ ಹಲವು ನಗರಸಭೆಗಳು ರದ್ದಾಗಿ ಅಧಿಕಾರಿಗಳಿಂದಲೇ ಆಡಳಿತೆ ನಡೆಸಲ್ಪಡುತ್ತಿವೆ.

ಈಗ ಹೊರಡಿಸಲ್ಪಟ್ಟಿರುವ ಸುಗ್ರೀವಾಜ್ಞೆಯಂತೆ ಈ ಕಾರ್ಪೊರೇಷನ್‌ಗಳಿಗೆ ಮೇಯರ್‌ಗಳನ್ನೂ, ಉಪ ಮೇಯರ್‌ಗಳನ್ನೂ, ಸದಸ್ಯರುಗಳನ್ನೂ ಸರಕಾರವೇ ನೇಮಿಸುವುದು. ನಗರ ಸಭೆಗಳಿಗೂ ಇದು ಅನ್ವಯವಾಗುತ್ತದೆ. ಹೀಗೆ ನೇಮಕಗೊಂಡ ನಗರಸಭೆಗಳು ಯಾರ ಹಿತ ಸಾಧಿಸುವುವು ? ನೇಮಕಗೊಂಡ ಪದಾಧಿಕಾರಿಗಳಿಗೆ ಯಾವ ಅಧಿಕಾರ ಇರುತ್ತದೆ ?

ಸಂಪಾದಕೀಯ

ನಗರಸಭೆಗಳು ಪ್ರಜಾಪ್ರಭುತ್ವಕ್ಕೆ ಬುನಾದಿಯೆಂದೂ, ಈ ಸಂಸ್ಥೆಗಳಲ್ಲಿ ಕೆಲಸಮಾಡಿದವರು ಮುಂದಕ್ಕೆ ಶಾಸನಸಭೆಗಳಲ್ಲೂ ಇತರ ಉನ್ನತ ಸಂಸ್ಥೆಗಳಲ್ಲೂ ಜವಾಬ್ದಾರಿ ಹೊರಲು ಯೋಗ್ಯರಾಗುತ್ತಾರೆಂದೂ ಕಾಂಗ್ರೆಸ್ ಮುಂದಾಳುಗಳು ಡಂಗುರ ಬಾರಿಸುತ್ತಿರುತ್ತಾರೆ. ಇದರಲ್ಲಿ ಅವರಿಗೆ ನಂಬಿಕೆ ಇರುವುದಾದರೆ ಈ ನಗರಸಭೆಗಳಿಗೆ ಚುನಾವಣೆ ನಡೆಸಲು ಯಾಕೆ ಹಿಂಜರಿಯುತ್ತಾರೆ ? ಚುನಾವಣೆ ನಡೆದು ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಆಡಳಿತೆ ನಡೆಸಲಿ.

ಈ ನಗರಸಭೆಗಳಿಗೆ ಚುನಾವಣೆ ನಡೆಸುವ ಆಶ್ವಾಸನೆಗಳನ್ನು ಎಷ್ಟು ಬಾರಿ ಸರಕಾರ ಕೊಟ್ಟಿತ್ತು ? ಶಾಸನ ಸಭೆಯಲ್ಲೂ ವಿಧಾನ ಪರಿಷತ್ತಿನಲ್ಲೂ ಕೊಟ್ಟ ಆಶ್ವಾಸನೆಗಳಿಗೆ ಬೆಲೆಯೇ ಇಲ್ಲವಾಗಿದೆ.

ಚುನಾವಣೆ ನಡೆದಲ್ಲಿ ವಿರೋಧ ಪಕ್ಷದವರು ಆರಿಸಲ್ಪಡಬಹುದೆಂಬ ಭಯವೋ ? ವಿಜಯವಾಡ, ವಿಶಾಖಪಟ್ಟಣಗಳ ಅನುಭವ ಸರಕಾರಕ್ಕೆ ಪೆಡಂಭೂತದಂತಾಗಿರಬೇಕು.

[ಕಡೇ ಪುಟ ನೋಡಿ]

ಬಿಹಾರ್‌ನಲ್ಲಿ ಕಾಂಗ್ರೆಸ್ ಆಡಳಿತ

ಕೃಷಿಕೂಲಿಕಾರರ ಮೇಲೆ ದಬ್ಬಾಳಿಕೆ

ಭ್ರಷ್ಟಾಚಾರ, ಹಿಂಸಾಚಾರ ಬಡಜನತೆಯ ಮೇಲೆ ಅತ್ಯಾಚಾರ ಇವೆಲ್ಲ ಬಿಹಾರ್‌ನ ಜಗನ್ನಾಥಮಿಶ್ರಾರ ಆಡಳಿತದಲ್ಲಿ ಅವ್ಯಾಹತವಾಗಿ ನಡೆಯುತ್ತಲೇ ಇವೆ. ಬಾಗಲ್ಪುರನಲ್ಲಿ ಕೈದಿಗಳ ಕಣ್ಣು ಕುಕ್ಕಿದ ಪ್ರಕರಣ ಜನ ಮನದಲ್ಲಿ ಇನ್ನೂ ಹಸಿರಾಗೇ ಉಳಿದಿದೆ.

ಇತ್ತೀಚೆಗೆ ಬಿಹಾರ್‌ನ ಗ್ರಾಮಾಂತರ ಪ್ರದೇಶದ ಕೃಷಿಕೂಲಿಕಾರರು, ಜೀತಗಾರರು ಇವರೆಲ್ಲ ಹೆಚ್ಚೆಚ್ಚು ಸಂಘಟಿತರಾಗುತ್ತಿದ್ದಾರೆ. ಜಮೀನ್ದಾರರ ಕಾಲ್ಕೆಳಗೆ ಸಿಕ್ಕು ನರಳುತ್ತಿದ್ದ ಈ ಬಡಪಾಯಿಗಳು ಜಾಗೃತರಾಗಿದ್ದು ಮಿಶ್ರರಿಗೆ ಕಿರಿಕಿರಿಯಾಗಿದೆ. ಈ ಕೃಷಿಕೂಲಿಕಾರರನ್ನು ನಕ್ಸಲೈಟ್ ಎಂಬ ಹಣೆಪಟ್ಟಿ ತಗಲಿಸಿ ಬೇಟೆ ಮಾಡುವ ಸನ್ನಾಹ ನಡೆದಿದೆ. ಇತ್ತೀಚೆಗೆ ನಡೆದ ಈ ಘಟನೆಗಳನ್ನು ನೋಡಿ :

ಪಾಟ್ನಾ ಜಿಲ್ಲೆಯ ಬಿಕ್ರಮ್‌ನಗರದ ಸಮೀಪದಲ್ಲಿರುವ ಪಿಲಹಿ ಎಂಬಲ್ಲಿ ಅಕ್ಟೋಬರ್ 23ರ ಬೆಳಗಿನ ಜಾವದಲ್ಲಿ ಸಶಸ್ತ್ರ ಪೋಲೀಸರು ಆ ಪುಟ್ಟಗ್ರಾಮದಲ್ಲಿ ಪ್ರವೇಶಿಸಿದರು. ಯುದ್ಧದ ಸಿದ್ಧತೆಯಲ್ಲೇ ಬಂದಿದ್ದರು. ಕೃಷಿಕೂಲಿಕಾರರ ಸಂಘಟನೆಯ ಸಕ್ರಿಯ ಚಟುವಟಿಕೆಕಾರರೆಂದು ತಾವು ಶಂಕಿಸಿದ 10 ಜನರನ್ನು ಹಗ್ಗಗಳಿಂದ ಬಂಧಿಸಿ ಪಿಲಹಿ ಗ್ರಾಮದ ಪಕ್ಕದ ಮುಲ್ಲಾಕ್ಕೆ ಕೊಂಡೊಯ್ಯಲು ಯತ್ನಿಸಿದರು. ಅಮಾಯಕ ಗ್ರಾಮ

[ಕಡೇ ಪುಟ ನೋಡಿ]

ಕೇಂದ್ರ ಸಮಿತಿಯ ನಿರ್ಣಯಗಳು

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕೇಂದ್ರ ಸಮಿತಿ ಅಕ್ಟೋಬರ್ 27 ರಿಂದ 31 ರ ವರೆಗೆ ನವದೆಹಲಿಯಲ್ಲಿ ಸಭೆ ಸೇರಿತ್ತು. ಪಕ್ಷದ ಹನ್ನೊಂದನೇ ಸಮ್ಮೇಳನದ ಕರಡು ರಾಜಕೀಯ ನಿರ್ಣಯವನ್ನು ಅದು ಅಂಗೀಕರಿಸಿತು. ಈ ಕರಡನ್ನು ಪಕ್ಷದ ಪ್ರತಿಯೊಂದು ಘಟಕವೂ ಚರ್ಚಿಸಿ ತಿದ್ದುಪಡಿ ಹಾಗೂ ಸಲಹೆಗಳೊಂದಿಗೆ ಕೇಂದ್ರ ಸಮಿತಿಗೆ ಕಳಿಸಬೇಕು. ಪಕ್ಷದ ಸಮ್ಮೇಳನ ರಾಜಕೀಯ ನಿರ್ಣಯವನ್ನು ಚರ್ಚಿಸುವಾಗ ಇದನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದು.

ಕೇಂದ್ರ ಸಮಿತಿ ತನ್ನ ಒಬ್ಬ ಬಹುಮೂಲ್ಯ ಸದಸ್ಯರಾಗಿದ್ದ ಕಾಮ್ರೇಡ್ ಎ. ಬಾಲಸುಬ್ರಹ್ಮಣ್ಯಂರಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಪಕ್ಷದ ಹನ್ನೊಂದನೇ ಸಮ್ಮೇಳನವನ್ನು ವಿಜಯವಾಡದಲ್ಲಿ ಜನವರಿ 26 ರಿಂದ 31 ರ ವರೆಗೆ ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿತು. ಇದರಲ್ಲಿ 2, 67, 232 ಸದಸ್ಯರನ್ನು ಪ್ರತಿನಿಧಿಸುವ 54 ಪ್ರತಿನಿಧಿಗಳು ಭಾಗವಹಿಸುವರು. ವೀಕ್ಷಕರ ಸಂಖ್ಯೆ 40 ನ್ನು ಮೀರುವುದಿಲ್ಲ. ಜಲಂಧರ್‌ನ ಹತ್ತನೇ ಸಮ್ಮೇಳನದ ನಂತರ ಪಕ್ಷದ ಸದಸ್ಯತ್ವದಲ್ಲಾದ ಹೆಚ್ಚಳ 45, 181.

ಕೇಂದ್ರ ಸಮಿತಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಉಂಟುಮಾಡಿದ ಯುದ್ಧಾಪಾಯ, IMF ಸಾಲ, ಕೇರಳದ ಬೆಳವಣಿಗೆಗಳು, ಅಸ್ಸಾಂ ಹಾಗೂ ಪಂಜಾಬ್ ಬಗ್ಗೆ ನಿರ್ಣಯಗಳನ್ನು ಕೈಗೊಂಡಿತು. ಅವುಗಳ ಸಂಕ್ಷಿಪ್ತ ವಿವರವನ್ನು ಮುಂದೆ ಕೊಟ್ಟಿದೆ.

ಐ.ಎಮ್.ಎಫ್. ಸಾಲ ರಾಷ್ಟ್ರವಿರೋಧೀ ವ್ಯವಹಾರ

5000 ಕೋಟಿ ರೂ.ಗಳ ಸಾಲಕ್ಕೆ ಪ್ರತಿಯಾಗಿ ಭಾರತ ಸರಕಾರ ಅಂತರ್‌ರಾಷ್ಟ್ರೀಯ ಹಣಕಾಸು ನಿಧಿಯೊಂದಿಗೆ ನಡೆಸಿರುವ ವ್ಯವಹಾರದ ಬಗ್ಗೆ ಕೇಂದ್ರ ಸಮಿತಿ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿದೆ. ಇದು ಭಾರತವನ್ನು ಮತ್ತು ಅದರ ಆರ್ಥಿಕತೆಯನ್ನು ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳಿಂದ ಕೂಡಿದ ಈ ಸಂಸ್ಥೆಯ ದಾಸ್ಯಕ್ಕೊಳಪಡಿಸುತ್ತದೆ. ಈ ನಿಧಿ ಸಾಲ ಮಂಜೂರು ಮಾಡಲು ಹಾಕುವ ಶರತ್ತುಗಳೇ ಇದಕ್ಕೆ ಸಾಕ್ಷಿ. ಇದರ ಪ್ರಕಾರ ಸರಕಾರ ಆರ್ಥಿಕರಂಗದಲ್ಲಿ ಯೋಜಿತ ಅಭಿವೃದ್ಧಿಯನ್ನು ಬಿಟ್ಟು ಈ ವಿದೇಶಿ ಹಣಕಾಸು ಸಂಸ್ಥೆಗೆ ಭಾರತದ ಆರ್ಥಿಕ ಸಾರ್ವಭೌಮತ್ವವನ್ನು ವಹಿಸಿಕೊಡಬೇಕು. ಅಗತ್ಯ ಸೇವಾ ನಿರ್ವಹಣಾ ಶಾಸನ, ಕೂಲಿಗಾಗಿ ಕಾಳು ಯೋಜನೆಯನ್ನು ಮೊಟಕುಗೊಳಿಸಿ ಕಾಳಿಗೆ ಬದಲು ನಗದು ಕೊಡುವುದು, ಆಹಾರ ಧಾನ್ಯಗಳ ಬೆಲೆಯೇರಿಸಿರುವುದು ಇತ್ಯಾದಿಗಳಿಗೂ ಈ ಹಣಕಾಸು ಸಂಸ್ಥೆಯ ಸಾಲಕ್ಕೂ ಸಂಬಂಧ ಇಲ್ಲದ್ದಿಲ್ಲ.

ಈಗಾಗಲೇ ಬಂಡವಾಳಶಾಹೀ ಮಾರ್ಗಾನುಸರಣೆ ಹಾಗೂ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳ ಮೇಲೆ ಹೆಚ್ಚುತ್ತಿರುವ ಅವಲಂಬನೆಯಿಂದಾಗಿ ಆರ್ಥಿಕ ದಾಸ್ಯದ ಅಂಚಿಗೆ ದೇಶ ತಳ್ಳಲ್ಪಡುತ್ತಿದೆ. ಆದ್ದರಿಂದ ಎಲ್ಲಾ ದೇಶಪ್ರೇಮೀಶಕ್ತಿಗಳು, ಪಕ್ಷಗಳು ಹಾಗೂ ಸಾಮೂಹಿಕ ಸಂಘಟನೆಗಳು ಈ ವ್ಯವಹಾರದ ವಿರುದ್ಧ ದನಿಯೇರಿಸಿ ಪ್ರತಿಭಟಿಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ.

ಯುದ್ಧಾಪಾಯದ ವಿರುದ್ಧ ಹೋರಾಡಿ

ಜಗತ್ತನ್ನು ಅಣು ವಿನಾಶದೆಡೆಗೆ ದಬ್ಬುತ್ತಿರುವ ಯುದ್ಧಾಪಾಯಗಳ ಬಗ್ಗೆ ಕೇಂದ್ರ ಸಮಿತಿ ತೀವ್ರ ಆತಂಕ ವ್ಯಕ್ತಪಡಿಸಿದೆ. ಸಮಿತಿಯ ಅಭಿಪ್ರಾಯದ ಪ್ರಕಾರ ಸಮಾಜವಾದೀ ಶಕ್ತಿಗಳ ಪ್ರಗತಿಗೆ ತಡೆಯೊಡ್ಡುವ ಹಾಗೂ ಹಳೆಯ ವಸಾಹತುಗಳ ಮೇಲೆ ಮತ್ತೆ ಅಧಿಕಾರ ಜಮಾಯಿಸಬೇಕೆನ್ನುವ ಅಮೇರಿಕಾದ ಆಕ್ರಮಣಕಾರೀ ಸಾಮ್ರಾಜ್ಯಶಾಹೀ ಧೋರಣೆಯೇ ಈ ಅಪಾಯಕ್ಕೆ ಕಾರಣ. ಸೋವಿಯೆತ್ ಸಂಘದ ಕಾಲ್ಪನಿಕ ಬೆದರಿಕೆಯನ್ನು ತಡೆಗಟ್ಟಲು ಅದು ಹೀಗೆ ಮಾಡುತ್ತಿದೆ ಎಂದು ಹೇಳಿಕೊಳ್ಳುತ್ತಿದೆ. ಈ ಮೂಲಕ ಜಗತ್ತನ್ನೆಲ್ಲಾ ತನ್ನ ಹಿಡಿತದಲ್ಲಿಟ್ಟುಕೊಳ್ಳಬೇಕೆಂಬ ತನ್ನ ಬಯಕೆಯನ್ನು ಮರೆಮಾಡಲು ಯತ್ನಿಸುತ್ತಿದೆ.

ಜಗತ್ತಿನ ಜನತಾ ಶಕ್ತಿಗಳು ಈ ಅಪಾಯದ ಬಗ್ಗೆ ತೀವ್ರವಾಗಿ ಯೋಚಿಸುತ್ತಿವೆ ಹಾಗೂ ಅದರ ವಿರುದ್ಧ ಸಿಡಿದು ನಿಂತಿವೆ ಎಂಬುದರ ಬಗ್ಗೆ ಕೇಂದ್ರಸಮಿತಿ ಸಮಾಧಾನ ವ್ಯಕ್ತಪಡಿಸಿದೆ. ಲಂಡನ್, ಪ್ಯಾರೀಸ್, ಬ್ರಸೆಲ್ಸ್, ರೋಮ್, ಬಾನ್ ಹಾಗೂ ಹೆಲ್‌ಸಿಂಕೀಯಲ್ಲಿ ಶಾಂತಿಗಾಗಿ ನಡೆಸಿದ ಭಾರೀ ಮತಪ್ರದರ್ಶನ, ಅಮೇರಿಕಾದಲ್ಲಿ ರೇಗನ್‌ರ ಸೈನಿಕವಾದೀ ಬಜೆಟ್ ವಿರುದ್ಧ ಪ್ರದರ್ಶನ, ಮುಂ

[ಕಡೇ ಪುಟ ನೋಡಿ]

ದಾಂಡೇಲಿಯ ಘಟನೆಯ ಖಂಡನೆ

ನ್ಯಾಯಬದ್ಧ ಕೇಳಿಕೆಗೋಸ್ಕರ ಹೋರಾಡುತ್ತಿದ್ದ ದಾಂಡೇಲಿಯ ಕಾರ್ಮಿಕರ ಮೇಲೆ ಪೋಲೀಸರು ಅಮಾನುಷ ದಾಳಿ ಮಾಡಿದ್ದನ್ನು ರಾಜ್ಯದ ನಾನಾಕಡೆ ಪ್ರತಿಭಟಿಸಲಾಗಿದೆ. (ಈ ಕುರಿತಾದ ವಿವರವಾದ ವರದಿ 8-11-81ರ ಐಕ್ಯರಂಗದಲ್ಲಿ ಪ್ರಕಟವಾಗಿದೆ.)

30-10-81ರಂದು ಬಾಗಲಕೋಟೆಯಲ್ಲಿ ನಗರಸಭೆಯ ಕಾರ್ಮಿಕರು ಸಭೆಸೇರಿ ದಾಂಡೇಲಿಯಲ್ಲಿ ನಡೆದ ಪೋಲೀಸ್ ಅತ್ಯಾಚಾರವನ್ನು ಖಂಡಿಸಿದರು. ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಕಾಂ. ಡಿ.ಎಂ. ಖಲಾಸಿಯವರು ನ್ಯಾಯಾಂಗ ತನಿಖೆಗೆ ಒತ್ತಾಯಿಸಿದರು.

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಗುಲ್ಬರ್ಗಾ ಘಟಕದ ಸಂಚಾಲಕಿ ಕಾಂ. ಕೆ. ಶರೀಫಾ ಅವರು ಹೇಳಿಕೆಯೊಂದನ್ನು ಹೊರಡಿಸಿ ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿದ್ದಾರೆ. ದೌರ್ಜನ್ಯಕ್ಕೆ ತುತ್ತಾದ ಭಾಗ್ಯಮ್ಮನಿಗೆ ಪರಿಹಾರ ಒದಗಿಸಿ, ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿದ್ದಾರೆ.

30-10-81ರಂದು ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ದಾಂಡೇಲಿ ಘಟನೆಯನ್ನು ಖಂಡಿಸಿ ಮೆರವಣಿಗೆ ಹೊರಡಿಸಲಾಗಿತ್ತು. ತಹಸೀಲ್ದಾರರಿಗೆ ಮನವಿ ಸಲ್ಲಿಸಿ ನ್ಯಾಯಾಂಗ ತನಿಖೆಗೆ ಒತ್ತಾಯಿಸಲಾಗಿದೆ.

ಹಾಸನದ ಕಾಫೀ ಕ್ಯೂರಿಂಗ್ ಕಾರ್ಮಿಕರು 30-10-81ರಂದು ಸಭೆ ನಡೆಸಿ ದಾಂಡೇಲಿಯ ಕಾರ್ಮಿಕರ ಮೇಲೆ ದೌರ್ಜನ್ಯವೆಸಗಿದ್ದನ್ನು ತೀವ್ರವಾಗಿ ಖಂಡಿಸಿದರು. ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿರುವರು.

○

ಬೀಡಿ ಕಾರ್ಮಿಕರ ಸಂಘ ಪ್ರಾರಂಭ

ಸುಳ್ಯ ತಾಲ್ಲೂಕಿನ ದೊಡ್ಡತೋಟದಲ್ಲಿ 22-10-81ರಂದು ಸುಳ್ಯ ತಾಲ್ಲೂಕು ಬೀಡಿ ಆ್ಯಂಡ್ ಜನರಲ್ ವರ್ಕರ್ಸ್ ಯೂನಿಯನ್ನಿನ ಘಟಕವನ್ನು ಪ್ರಾರಂಭಿಸಲಾಯಿತು. ಕಾಂ ಬಿ. ಸರಸ್ವತಿಯವರು ಉದ್ಘಾಟನೆಯನ್ನು ನೆರವೇರಿಸಿದರು. ಕಾಂ. ಮೋನಪ್ಪ ಗೌಡರು ಬೀಡಿಕಾರ್ಮಿಕರ ಸಮಸ್ಯೆ ಕುರಿತು ಮಾತನಾಡಿದರು.

ಕಾಂ. ಸೀತಾ ಅಧ್ಯಕ್ಷರಾಗಿರುವ ಹಾಗೂ ಪುಷ್ಪಲತಾ ಕಾರ್ಯದರ್ಶಿಯಾಗಿರುವ ಸಮಿತಿಯೊಂದನ್ನು ಚುನಾಯಿಸಲಾಯಿತು.

27-10-81ರಂದು ಕುಕ್ಕುಜಡ್ಕದಲ್ಲಿ ಬೀಡಿಕಾರ್ಮಿಕರ ಯೂನಿಯನ್ನಿನ ಘಟಕವನ್ನು ಪ್ರಾರಂಭಿಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ. ಸರಸ್ವತಿ ಮತ್ತು ಮೋನಪ್ಪಗೌಡರು ಮಾತನಾಡಿದರು. ಪುಷ್ಪವತಿ ಪೈಲಾರು ಅಧ್ಯಕ್ಷೆಯಾಗಿರುವ ಮತ್ತು ಸುನಂದ ಕಾರ್ಯದರ್ಶಿಯಾಗಿರುವ ಹೊಸ ಸಮಿತಿಯನ್ನು ಚುನಾಯಿಸಲಾಯಿತು. ಶ್ರೀಮತಿ ಸೀತಮ್ಮನವರು ಅಧ್ಯಕ್ಷತೆ ವಹಿಸಿದ್ದರು.

○

ಬೀದರ್ ಜಿಲ್ಲಾ ಸಮ್ಮೇಳನ

ನವೆಂಬರ 7 ರಂದು ಬೀದರ್‌ನಲ್ಲಿ ಅಖಿಲಭಾರತ ಅಧಿವೇಶನದ ಪೂರ್ವಭಾವಿಯಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮ್ಮೇಳನ ನಡೆಯಿತು. ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಸಿ. ನಂಜುಂಡಪ್ಪ ಮತ್ತು ರಾಜ್ಯಸಮಿತಿಯ ಸದಸ್ಯ ಕಾಂ. ಮಹಮ್ಮದ್ ಹಸನ್ ಖಾನ್ ಇವರು ಹಾಜರಿದ್ದು ಸಮ್ಮೇಳನಕ್ಕೆ ಮಾರ್ಗದರ್ಶನ ಮಾಡಿದರು. ಕಾಂ. ಬಾಪುರೆಡ್ಡಿ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಕಾಂ. ಬಾಲಸುಬ್ರಮಣ್ಯಂ, ಕಾಂ. ಭೂಪೇಶ ಗುಪ್ತ ಮತ್ತು ಬೀದರನ ಕಾಂ. ಖಮರುದ್ದೀನರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಸುಂದರರಾಜ್ ಅವರು ವರದಿ ವರದಿ ಮಂಡಿಸಿದರು. ವರದಿ ಮೇಲೆ ಚರ್ಚೆ ನಡೆದು ವರದಿಯನ್ನು ಅಂಗೀಕರಿಸಲಾಯಿತು.

ಕಾಂ. ಸುಂದರರಾಜ್ ಜಿಲ್ಲಾ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ಅಂದು ಸಂಜೆ ಬಹಿರಂಗ ಸಭೆಯನ್ನೇರ್ಪಡಿಸಲಾಗಿತ್ತು. ಕಾಂ. ಸಿ. ನಂಜುಂಡಪ್ಪ ಮತ್ತು ಹಸನ್ ಖಾನ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

●

ಎಸ್. ಎಫ್. ಐ. ಮುಖಂಡ ಕಾಂ. ಥಾಮಸ್‌ರ ಕೊಲೆಯ ಖಂಡನೆ

3-11-81ರಂದು ನಡೆದ ಕೇರಳದ ತ್ರಿಚೂರ್ ಜಿಲ್ಲಾ ಎಸ್. ಎಫ್. ಐ. ಸಮಿತಿ ಸದಸ್ಯ ಹಾಗೂ ತ್ರಿಚೂರ್ ಸರಕಾರಿ ಕಾಲೇಜಿನ ಯೂನಿಯನ್ ಅಧ್ಯಕ್ಷ ಕಾಂ. ಕೆ.ಆರ್. ಥಾಮಸ್ ಅವರ ಕೊಲೆಯನ್ನು ಎಸ್. ಎಫ್. ಐ. ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಕಾಂ. ಥಾಮಸ್ ಅವರ ಕೊಲೆಗೆ ಆರ್. ಎಸ್. ಎಸ್. ಮತ್ತು ಅದರ ವಿದ್ಯಾರ್ಥಿ ಸಂಘಟನೆಯಾದ ಎಬಿವಿಪಿಯ ಗೂಂಡಾಗಳು ಕಾರಣರಾಗಿದ್ದಾರೆ.

ಈ ಕುರಿತು ಹೇಳಿಕೆಯೊಂದನ್ನು ಹೊರಡಿಸಿರುವ ಎಸ್. ಎಫ್. ಐ. ಕರ್ನಾಟಕ ರಾಜ್ಯಸಮಿತಿ ಅಧ್ಯಕ್ಷ ಕಾಂ. ಜಯಕುಮಾರ್, ಕಾಂ. ಥಾಮಸ್ ಅವರ ಕೊಲೆಯ ಕುರಿತು ಸಂತಾಪ ವ್ಯಕ್ತಪಡಿಸಿದ್ದಾರೆ. ಕೊಲೆಗೆ ಕಾರಣರಾದವರನ್ನು ಕೂಡಲೇ ಬಂಧಿಸಬೇಕೆಂದು ಒತ್ತಾಯಿಸಿದ್ದಾರೆ.

○

ದ. ಸಂ. ಸ. ಸಭೆ

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ 7-11-81ರಂದು ದಲಿತ ಸಂಘರ್ಷ ಸಮಿತಿಯ ಸರ್ವಸದಸ್ಯರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಎಸ್. ಎಸ್. ಹಿರೇಮಠರು ವಹಿಸಿದ್ದರು. ಸಭೆಗೆ ಮುಖ್ಯ ಅತಿಥಿಯಾಗಿ ಬೆಂಗಳೂರಿನ ದಲಿತ ಸಾಹಿತಿ ಹಣಮಂತಯ್ಯ ಆಗಮಿಸಿದ್ದರು. ಹೊಸಪೇಟೆಯ ದ. ಸಂ. ಸ. ಸಂಚಾಲಕ ಪರಶುರಾಮ್ ಕಲಾಲ್ ಸಭೆಯಲ್ಲಿ ಪಾಲ್ಗೊಂಡಿದ್ದರು.

●

ಭೂನ್ಯಾಯ ಮಂಡಳಿಯ ಅನ್ಯಾಯದ ನಿದರ್ಶನ

ಮಂಗಳೂರು ಸಮೀಪದ ಕಿನ್ನಿಗೋಳಿಯ ಬಜಲ್‌ಸಿಕ್ವೇರ ಎಂಬುವವರು 1954ರಿಂದಲೂ ಸಾಗುವಳಿ ಮಾಡುತ್ತಾ ಬಂದಿದ್ದ ಕುಮೇರಿ ಭೂಮಿಗೆ 1974ರಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯು ಮಂಗಳೂರು 5ನೇ ಭೂನ್ಯಾಯ ಮಂಡಳಿ ಮುಂದೆ ತನಿಖೆಗೆ ಬಂದಿತು.

ಸ್ಥಳ ತನಿಖೆಗೆ ಭೂನ್ಯಾಯ ಮಂಡಳಿಯು ಬಂದಿರುವಾಗ ಹತ್ತಿರದವರ ಯಾವತ್ತೂ ಪ್ರತ್ಯಕ್ಷ ಸಾಕ್ಷಿಗಳನ್ನು ನಿರಾಕರಿಸಲಾಯಿತು. ಕೃಷಿ ಮಾಡಿರುವ ಬಗ್ಗೆ ಇರುವ ಕುರುಹುಗಳನ್ನೂ ದಾಖಲುಮಾಡಿಕೊಳ್ಳಲಿಲ್ಲ.

29-10-81ರಂದು ಭೂನ್ಯಾಯ ಮಂಡಳಿಯ ತೀರ್ಪು ಹೊರಬಿದ್ದಿದೆ. ತಕರಾರು ಸ್ಥಳ ಹಾಗೂ ಒಪ್ಪಿಗೆಯ ಸ್ಥಳ ಇವೆರಡಕ್ಕೂ ಅರ್ಜಿದಾರರು ಬೇಸಾಯಗಾರರಲ್ಲವೆಂದು ತೀರ್ಪನ್ನು ನ್ಯಾಯಮಂಡಳಿ ನೀಡಿದೆ.

ಇದು ಭೂನ್ಯಾಯ ಮಂಡಳಿಯ ನ್ಯಾಯದಾನದ ವೈಖರಿಗೆ ಒಂದು ನಿದರ್ಶನ.

●

ಎಸ್.ಎಫ್.ಐ. ಸಮಿತಿ ರಚನೆ

ಮಂಗಳೂರಿನ ಗಣಪತಿ ಜ್ಯೂನಿಯರ್ ಕಾಲೇಜಿನಲ್ಲಿ ಎಸ್. ಎಫ್. ಐ. ಸಮಿತಿಯನ್ನು ರಚಿಸಲಾಗಿದೆ. ಸಮಿತಿಗೆ ಅಧ್ಯಕ್ಷರಾಗಿ ಶಶಿಧರಆಳ್ವ, ಉಪಾಧ್ಯಕ್ಷರಾಗಿ ಹರೀಶ್‌ಕುಮಾರ್, ಕಾರ್ಯದರ್ಶಿಯಾಗಿ ಶಂಕರನಾರಾಯಣ ಹಾಗೂ ಜೊತೆಕಾರ್ಯದರ್ಶಿಯಾಗಿ ಸುಧಾಕರ ಆಯ್ಕೆಯಾಗಿದ್ದಾರೆ.

ಮಂಗಳೂರಿನ ಶ್ರೀರಾಮ ಹೈಸ್ಕೂಲ್‌ನಲ್ಲಿ ಎಸ್. ಎಫ್. ಐ. ಸಮಿತಿ ರಚಿಸಲಾಗಿದೆ. ನೂತನ ಘಟಕದ ಅಧ್ಯಕ್ಷರಾಗಿ ಸುರೇಶ್, ಉಪಾಧ್ಯಕ್ಷರಾಗಿ ಚಂದ್ರಶೇಖರ, ಕಾರ್ಯದರ್ಶಿಯಾಗಿ ರಮಾನಾಥ ಹಾಗೂ ಜೊತೆ ಕಾರ್ಯದರ್ಶಿಯಾಗಿ ಹರೀಶ್ ಆಯ್ಕೆಯಾಗಿದ್ದಾರೆ.

ಈ ಮೇಲ್ಕಾಣಿಸಿದ ಎರಡೂ ಸಭೆಗಳಲ್ಲಿ ಎಸ್. ಎಫ್. ಐ.ನ ಮಂಗಳೂರು ತಾಲ್ಲೂಕು ಸಮಿತಿ ಅಧ್ಯಕ್ಷ ಕಾಂ. ನಿರಂಜನರಾವ್ ಮತ್ತು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ.ಉಮೇಶ್ ಭಂಡಾರಿ ಉಪಸ್ಥಿತರಿದ್ದರು.

○

ಕಾಂ. ರಾಜು ನಿಧನ

ಬೆಂಗಳೂರಿನ ಶ್ರೀರಾಂಪುರ ಪ್ರದೇಶದ ಪಕ್ಷದ ಕಾರ್ಯಕರ್ತರಾದ ಕಾಂ. ರಾಜು ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಕೆ. ಜಿ. ಎಫ್.ಗೆ ತೆರಳಿದ್ದ ಕಾಂ. ರಾಜು ಪಕ್ಷದ ಸಭೆಯ ನಿಮಿತ್ತ ಬೆಂಗಳೂರಿಗೆ ಬರುತ್ತಲಿದ್ದಾಗ ಬಸ್‌ನಲ್ಲೇ ಸಾವನ್ನಪ್ಪಿದ್ದಾರೆ.

ಕಾಂ. ರಾಜು 50ರ ದಶಕದಲ್ಲಿ ಎಚ್.ಎ.ಎಲ್.ನಿಂದ ಯೂನಿಯನ್ ಚಟುವಟಿಕೆಗಳಿಂದಾಗಿ ಡಿಸ್‌ಮಿಸ್ ಆಗಿದ್ದರು. ಶ್ರೀರಾಂಪುರ ಪ್ರದೇಶದಲ್ಲಿ ಜನಾನುರಾಗಿಯಾಗಿದ್ದ ಕಾಂ. ರಾಜು ಪಕ್ಷದ ಶ್ರೀರಾಂಪುರ ಸ್ಥಳೀಯ ಸಮಿತಿಯ ಸದಸ್ಯರಾಗಿದ್ದರು.

7-11-81ರಂದು ನಡೆದ ಅಂತ್ಯಸಂಸ್ಕಾರದಲ್ಲಿ ನೂರಾರು ಪಾರ್ಟಿ ಸಂಗಾತಿಗಳು, ಕಾರ್ಮಿಕರು ಭಾಗಿಯಾಗಿದ್ದರು. ನಂತರ ರುದ್ರಭೂಮಿಯಲ್ಲೇ ನಡೆದ ಸಂತಾಪ ಸೂಚಕ ಸಭೆಯನ್ನುದ್ದೇಶಿಸಿ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ವಿ. ಜೆ. ಕೆ. ನಾಯರ್ ಮತ್ತು ಕಾಂ. ಪಿ. ಕೆ. ಸುಬ್ರಮಣಿ ಮಾತನಾಡಿ ಸಂತಾಪ ವ್ಯಕ್ತಪಡಿಸಿದರು.

"ಕಾಂ. ರಾಜು ಅವರ ನಿಧನ ಆಘಾತಕರ" ಎಂದಿರುವ ಶ್ರೀರಾಂಪುರ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಕಾಂ. ರಮೇಶ್ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ, ಜಿಲ್ಲಾ ಸಮಿತಿಗಳು ತಮ್ಮ ಶೋಕ ವ್ಯಕ್ತಪಡಿಸಿವೆ.

○

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಕಾಂಗ್ರೆಸ್(ಎಸ್) ಕೇರಳ ಜನತೆಗೆ ವಿಶ್ವಾಸಘಾತ ಮಾಡಿದೆ

ಅಕ್ಟೋಬರ್ 16ರಂದು ಕೇರಳದ ಎಡ-ಪ್ರಜಾಪ್ರಭುತ್ವ ರಂಗದಿಂದ ಹೊರಬಂದು ಕಾಂಗ್ರೆಸ್ (ಎಸ್)ನ ಕೇರಳ ಘಟಕ ಕೇರಳದ ಜನತೆಗೆ ದೊಡ್ಡ ವಿಶ್ವಾಸಘಾತ ಮಾಡಿದೆ. ಅಕ್ಟೋಬರ್ 20ರಂದು ಕೇರಳ ಕಾಂಗ್ರೆಸ್ (ಮಣಿ) ಇದನ್ನೇ ಮುಂದುವರಿಸಿ ಈ ನಾಚಿಕೆಗೇಡಿನ ಕೆಲಸದಲ್ಲಿ ಪಾಲುದಾರನಾಗಿದೆ. ಈ ಮೂಲಕ ಈ ಎರಡು ಪಕ್ಷಗಳು ಯಾರ ವಿರುದ್ಧವಾಗಿ ಎಡ-ಪ್ರಜಾಪ್ರಭುತ್ವ ರಂಗ ಸೇರಿದ್ದವೋ ಅದೇ ಕಾಂಗ್ರೆಸ್ (ಐ)ನ ಹಂಚಿಕೆಗಳನ್ನೆಲ್ಲಾ ಕೇರಳದ ಜನತೆ ಮಣ್ಣುಮುಕ್ಕಿಸಿದಾಗ ಕಾಂಗ್ರೆಸ್ (ಐ)ನ ನೆರವಿಗೆ ನಿಂತರು! ಕಾಂಗ್ರೆಸ್ (ಐ) ಮೊದಲು ಕೇಂದ್ರದಲ್ಲಿನ ತನ್ನ ಅಧಿಕಾರದ ಮೂಲಕ ನಂತರ 1959ರ ಮಾದರಿಯ 'ವಿಮೋಚನಾ ಸಮರ' ಮತ್ತೆ ನಡೆಸುವ ಯೋಚನೆಯ ಮೂಲಕ ಎಡ-ಪ್ರಜಾಪ್ರಭುತ್ವ ಸರಕಾರವನ್ನು ಉರುಳಿಸಲು ಪ್ರಯತ್ನಿಸಿ ಅದು ಸಂಪೂರ್ಣವಾಗಿ ವಿಫಲವಾದ ಮೇಲೆ ತನ್ನ ಉದ್ದೇಶ ಅದಿರಲೇ ಇಲ್ಲ ಎಂದು ಹೇಳುವ ಮಟ್ಟಿಗಿಳಿಯಬೇಕಾಗಿ ಬಂದುದು ಈಗ ಹಳೆಯ ಮಾತು.

೨೧ ತಿಂಗಳ ಉತ್ತಮ ದಾಖಲೆ

ಕೇರಳ ರಂಗ ಸ್ಥಾಪನೆಯಾದದ್ದು ಒಂದು ಸರ್ವಸಮ್ಮತ ಕಾರ್ಯಕ್ರಮದ ಆಧಾರದ ಮೇಲೆ. ಸರ್ವಾಧಿಕಾರೀ ಶಕ್ತಿಗಳ ವಿರುದ್ಧ ಜಂಟಿ ಹೋರಾಟ ನಡೆಸುವುದು ಈ ಕಾರ್ಯಕ್ರಮದ ಒಂದು ಮುಖ್ಯ ಅಂಶ. ಕಳೆದ ಚುನಾವಣೆಯಲ್ಲಿ ಕೇರಳದ ಪರಿಸ್ಥಿತಿಯ ತೀವ್ರ ಮಿತಿಗಳೊಳಗೇ ಕೆಲವಾದರೂ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟಿತು. ಎಲ್ಲಾ ಅಂಗ ಪಕ್ಷಗಳೂ ಒಟ್ಟು ಸೇರಿ ತಯಾರಿಸಿದ ಆ ಚುನಾವಣಾ ಪ್ರಣಾಳಿಕೆಯಲ್ಲಿತ್ತ ವಚನಗಳನ್ನು ಪರಿಪಾಲಿಸಲು ಎಡ-ಪ್ರಜಾಪ್ರಭುತ್ವರಂಗ ಬಹಳಷ್ಟು ಶ್ರಮಿಸಿದೆಯೆಂದು ಅದರ 21 ತಿಂಗಳ ದಾಖಲೆ ಪರಿಶೀಲಿಸಿದರೆ ಗೊತ್ತಾಗುತ್ತದೆ.

ಕೇರಳದ ಸಣ್ಣ, ಮಧ್ಯಮ ರೈತರು, ಕೃಷಿಕಾರ್ಮಿಕರು, ಮೀನುಗಾರರು ಇತ್ಯಾದಿ ಕಸಬುದಾರರು, ಕಾರ್ಮಿಕರು, ಸರಕಾರೀ ಹಾಗೂ ಇತರ ಮಧ್ಯಮ ವರ್ಗದ ನೌಕರರು, ಸಣ್ಣವ್ಯಾಪಾರಿಗಳು ಇತ್ಯಾದಿ ಸಮಾಜದ ಸುಮಾರಾಗಿ ಎಲ್ಲಾ ವಿಭಾಗಗಳು ಎಡ-ಪ್ರಜಾಪ್ರಭುತ್ವ ರಂಗದ 21 ತಿಂಗಳ ಆಡಳಿತ ಕಾಲದಲ್ಲಿ ಪ್ರಯೋಜನ ಪಡೆದಿವೆಯೆಂಬುದು ಸುಸ್ಪಷ್ಟ. ರೈತರಿಗೆ ಕೊಡುವ ಸಾಲದಲ್ಲಿ ಸಹಾಯಧನ, ಕೆಲವು ಸಂದರ್ಭಗಳಲ್ಲಿ ಸಾಲದ ಬಡ್ಡಿ, ಕಂದಾಯ ಇತ್ಯಾದಿಗಳನ್ನು ಮನ್ನಾ ಮಾಡಿದ್ದು, ಕೃಷಿಕಾರ್ಮಿಕರಿಗೆ ವಿರಾಮವೇತನ, ಮೀನುಗಾರರ ಸಹಕಾರ ಸಂಘ, ಗುಂಪುವಿಮೆ, ಮಧ್ಯಮ ವರ್ಗದ ನೌಕರರ ವೇತನದಲ್ಲಿ ಹೆಚ್ಚಳ, ಜೀವನ ಸೂಚ್ಯಂಕದ ಕೆಲವು ಕೊರತೆಗಳನ್ನು ಸರಿಪಡಿಸಿದ್ದು, ಸಣ್ಣ ವ್ಯಾಪಾರಸ್ಥರ ಮೇಲಿನ ಕರಭಾರ ತಗ್ಗಿಸಿದ್ದು ಇವು ಎಡ-ಪ್ರಜಾಪ್ರಭುತ್ವ ಸರಕಾರ ಕೈಗೊಂಡ ಕೆಲವು ಕ್ರಮಗಳು. ಇತ್ತೀಚೆಗೆ ಓಣಂ ಹಬ್ಬದ ಸಮಯದಲ್ಲಿ ಅವಶ್ಯಕ ಸಾಮಗ್ರಿಗಳನ್ನು ಪಡಿತರ ವ್ಯವಸ್ಥೆಯ ಮೂಲಕ ದಕ್ಷ ರೀತಿಯಲ್ಲಿ ಹಂಚಿ ಇಂತಹ ಸಂದರ್ಭಗಳಲ್ಲಿ ಬೇರೆ ರಾಜ್ಯಗಳಲ್ಲಾದಂತೆ ಬೆಲೆಯೇರಿಕೆಯಾಗದಂತೆ ನೋಡಿಕೊಳ್ಳಲಾಯಿತು. ಇದು ಕೇರಳರಂಗದ ಒಂದು ದೊಡ್ಡ ಸಾಧನೆ. ಕೇಂದ್ರ ಸರಕಾರದ ಸರ್ವಾಧಿಕಾರೀ ಶಾಸನಗಳಾದ ರಾಷ್ಟ್ರೀಯ ಭದ್ರತಾ ಶಾಸನ, ಅಗತ್ಯಸೇವಾ ನಿರ್ವಹಣಾ ಶಾಸನವನ್ನು ರಾಜ್ಯದಲ್ಲಿ ಉಪಯೋಗಿಸಲು ನಿರಾಕರಿಸಿತು. ಒಂದು ರಾಜ್ಯಸರಕಾರಕ್ಕಿರುವ ಸೀಮಿತ ಅಧಿಕಾರದಲ್ಲೇ ಇವನ್ನೆಲ್ಲಾ ಸಾಧಿಸಲಾಯಿತೆಂದು ಗಮನಿಸಬೇಕು.

ಅಂತೋಣಿಯವರ ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆ

ಕೇರಳದ ಎಡ-ಪ್ರಜಾಪ್ರಭುತ್ವ ರಂಗದ ಕಾರ್ಯನಿರ್ವಹಣೆಯಲ್ಲಿ ದೋಷಗಳಿರಲಿಲ್ಲವೆಂದೇನಲ್ಲ. ರಂಗ ಜನತೆಗೆ ಕೊಟ್ಟ ಕೆಲವು ವಚನ ಪಾಲಿಸಲಾಗಲಿಲ್ಲ. ಇದಕ್ಕೆ ಕಾರಣ ಈ ಎರಡು ಪಕ್ಷಗಳು ತಮ್ಮ ಜವಾಬ್ದಾರಿಯನ್ನು ಮರೆತು ಎಡ-ಪ್ರಜಾಪ್ರಭುತ್ವರಂಗ ಹಾಗೂ ಸರಕಾರ ಕೈಗೊಳ್ಳಬೇಕೆಂದಿದ್ದ ಕೆಲವು ಕ್ರಮಗಳಿಗೆ ತಡೆಯೊಡ್ಡಿದ್ದು. ಈ ಬಗ್ಗೆ ಕೊಂಚವೂ ಬೇಸರಪಡದ ಎ. ಕೆ. ಅಂತೋಣಿಯವರು ರಾಜ್ಯದ ಕಾಂಗ್ರೆಸ್ (ಐ) ನೇತೃತ್ವದ ವಿರೋಧಿ ಪಕ್ಷಗಳ ಅರ್ಥವಿಲ್ಲದ ಕೂಗಾಟಕ್ಕೆ ತಾನೂ ತಾಳ ಹಾಕಿ 'ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆ'ಯ ಜಪಮಾಡುತ್ತಿದ್ದರು. ಅಂತೋಣಿಯವರ ಈ ಸಮಸ್ಯೆಯ ಪರಿಶೀಲನೆ ಮಾಡಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಕಾಂಗ್ರೆಸ್ (ಎಸ್) ರಂಗ ಬಿಟ್ಟದ್ದು 'ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆ'ಯಿಂದಾಗಿ ಅಲ್ಲ. ಬದಲಾಗಿ, ಕೇರಳದ ಕಾಂಗ್ರೆಸ್ (ಎಸ್) ಎಡ-ಪ್ರಜಾಪ್ರಭುತ್ವರಂಗದಿಂದ ಹೊರಹೋಗುವ ನಿರ್ಧಾರ ಮೊದಲು ಕೈಗೊಂಡಿತು—ಆ ಮೇಲೆ ಕಾನೂನು ವ್ಯವಸ್ಥೆಯ ಬೊಬ್ಬೆ ಹಾಕಲಾರಂಭಿಸಿತು. ಕಾಂಗ್ರೆಸ್ (ಐ) ಎಡ-ಪ್ರಜಾಪ್ರಭುತ್ವ ಸರಕಾರ ಅಧಿಕಾರವಹಿಸಿಕೊಂಡ ಮೂರನೇ ದಿನದಿಂದಲೇ ಆರಂಭಿಸಿದ್ದನ್ನು ಕಾಂಗ್ರೆಸ್ (ಎಸ್) ಈಗ ಆರಂಭಿಸಿತು. 1979ರ ಜನವರಿಯಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಅಂತೋಣಿಯವರ ಜತೆ ಉಳಕೊಂಡಿದ್ದ ಕೆಲವು ಜನಕ್ಕೆ ತಾವು ಕಾಂಗ್ರೆಸ್ (ಐ)ನಲ್ಲೇ ಮಜವಾಗಿ ಇರಬಹುದಿತ್ತು ಎಂದೆನಿಸಿತ್ತು. ಅಂತೋಣಿ ಈಗ ಅಂತಹ ಕಾಂಗ್ರೆಸ್ಸಿಗರನ್ನು ಸೇರಿಕೊಂಡಿದ್ದಾರೆ.

ಅಂತೋಣಿಯವರ ಕೆಲವು ಕಾನೂನು-ವ್ಯವಸ್ಥೆ ಸಮಸ್ಯೆಗಳನ್ನು ಪರಿಶೀಲಿಸಿದರೆ ಅವರ ವಿಶಿಷ್ಟ ನಿಲುವು ಏನೆಂಬುದು ಅರ್ಥವಾಗುತ್ತದೆ. "ತಿರುವನಂತಪುರದ ಜಿಲ್ಲಾ ಕಾಂಗ್ರೆಸ್ ಕಚೇರಿ ಮೇಲೆ ಸಿ. ಐ. ಟಿ. ಯು. ಕಾರ್ಯಕರ್ತರ ಹಲ್ಲೆ" ಎಂದು ಬಹಳಷ್ಟು ಪ್ರಚಾರಗೊಂಡ ಘಟನೆಯನ್ನು ಮೊದಲು ತೆಗೆದುಕೊಳ್ಳೋಣ. ಒಬ್ಬ ನಕ್ಸಲ್‌ವಾದೀ ಶಿಕ್ಷಕರ ಬಂಧನವನ್ನು ಕಾಂಗೆಸ್(ಐ) ಹಾಗೂ ಅಂತೋಣಿಯವರ ಪಕ್ಷದ ವಿದ್ಯಾರ್ಥಿಸಂಘಗಳು ವಿರೋಧಿಸಿ ಶಾಲೆಗಳನ್ನು ಬಂದ್‌ಮಾಡಲು ನಿರ್ಧರಿಸಿದವು. ಆದರೆ ಬಹುಪಾಲು ವಿದ್ಯಾರ್ಥಿ ಸಮುದಾಯ ಮತ್ತು ಎಸ್. ಎಫ್. ಐ. ಇದಕ್ಕೆ ಒಪ್ಪಿರಲಿಲ್ಲ. ಆದರೆ INTUC ಗೂಂಡಾಗಳನ್ನುಪಯೋಗಿಸಿ ವಿದ್ಯಾರ್ಥಿಗಳನ್ನು ಬಲವಂತಮಾಡಲು ಪ್ರಯತ್ನಿಸಲಾಯಿತು. ಎಸ್.ಎಫ್.ಐ. ಕಾರ್ಯಕರ್ತರಿಗೆ ಹೊಡೆಯಲಾಯಿತು. ಸುದ್ದಿ ಕೇಳಿ ರೇಗಿದ ಸಿ ಐ ಟಿ.ಯು. ಕಾರ್ಯಕರ್ತರು ಸಹಾಯಕ್ಕೆ ಬಂದಾಗ INTUC ಗೂಂಡಾಗಳು ಜಿಲ್ಲಾ ಕಾಂಗ್ರೆಸ್ ಕಚೇರಿಗೆ ನುಗ್ಗಿದರು. ಜತೆಗೆ ಇಬ್ಬರು ಎಸ್. ಎಫ್. ಐ. ವಿದ್ಯಾರ್ಥಿಗಳನ್ನೂ ಎಳೆದೊಯ್ದರು. ಅವರ ರಕ್ಷಣೆಗಾಗಿ ಸಿ.ಐ.ಟಿ.ಯು. ಕಾರ್ಯಕರ್ತರು ಕಚೇರಿ ನುಗ್ಗಬೇಕಾಯಿತು. ಹೀಗಿದ್ದರೂ ಸಿ.ಪಿ.ಐ.(ಎಂ) ಹಾಗೂ ಸಿ.ಐ.ಟಿ.ಯು. ಶಿಸ್ತುಪಾಲನೆ ದೃಷ್ಟಿಯಿಂದ ಈ ಘಟನೆಗೆ ಸಂಬಂಧಪಟ್ಟ ತನ್ನ ಸದಸ್ಯರ ಮೇಲೆ ಕ್ರಮ ಕೈಗೊಂಡವು! ಆದರೆ ಅಂತೋಣಿ? ಕಾನೂನು ವ್ಯವಸ್ಥೆಯ ಬಗ್ಗೆ ತನಗೇ ಕಾಳಜಿ ಇರುವುದೆನ್ನುವಂತೆ ವರ್ತಿಸುವ ಅವರು INTUC ಗೂಂಡಾಗಳ ವರ್ತನೆ ಬಗ್ಗೆ ತುಟಿಪಿಟಕ್ಕೆನ್ನಲಿಲ್ಲ.

ಕೂಲಿ ತಕರಾರುಗಳು ಕಾನೂನು ಸಮಸ್ಯೆಗಳಲ್ಲ

ಅಂತೋಣಿಯವರು ತಮ್ಮ ಅಪಪ್ರಚಾರಕ್ಕೆ ಬಳಸಿಕೊಂಡ ಇತರ ಮೂರು ಘಟನೆಗಳು ನಿಜವಾಗಿ ಕಾರ್ಮಿಕ-ಮಾಲೀಕರ ನಡುವಿನ ಸಂಬಳ ತಕರಾರಿನ ಸಮಸ್ಯೆಗಳು-ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಗಳಲ್ಲ. ವಿಲ್ಲಂಗಾಡಿನಲ್ಲಿ ಹರಿಜನ ಗಿರಿಜನ ಕೃಷಿ ಕಾರ್ಮಿಕರಿಗೆ ತೀರಾ ಕಮ್ಮಿ ಕೂಲಿ ದೊರೆಯುತ್ತಿತ್ತು. ಅವರು ಅದರಿಂದಾಗಿ ಕೃಷಿಕಾರ್ಮಿಕ ಸಂಘ ಕಟ್ಟಿಕೊಂಡು ಸುತ್ತಮುತ್ತಲ ಕ್ಷೇತ್ರಗಳಲ್ಲಿ ಸಿಗುವಷ್ಟು ಕೂಲಿಸಿಗಬೇಕೆಂದು ಬೇಡಿಕೆ ಮಂಡಿಸಿದರು. ಆ ಬಗ್ಗೆ ಇತ್ಯರ್ಥವೂ ಆಯಿತು. ಆದರೆ ಭೂಮಾಲೀಕರು ಈ ಒಪ್ಪಂದ ಮುರಿದಕಾರಣ ಸಂಘ ಪ್ರದರ್ಶನ ನಡೆಸಿತು. ಪೋಲೀಸರೆದುರೇ ಭೂಮಾಲಕರು ಸಂಘದ ನಾಯಕರ ಮೇಲೆ ಕೈಮಾಡಲೆತ್ನಿಸಿದರು. ಪೋಲೀಸ್ ಮಧ್ಯಪ್ರವೇಶಿಸಿ ಅವರನ್ನು ರಕ್ಷಿಸಿತು.

ತ್ರಿಚೂರಿನ ಘಟನೆ ಅಂಗಡಿ ಮಾಲೀಕರು ಓಣಂ ಸಮಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಮುರಿಯಲು ಹಾಗೂ ಅಂಗಡಿಯ ನೌಕರರನ್ನು ಕೆಲಸದಿಂದ ವಜಾಮಾಡುವುದಕ್ಕಾಗಿ ಅಂಗಡಿಗಳನ್ನು ಮುಚ್ಚಿದ್ದರಿಂದಾಗಿ ನಡೆಯಿತು. 50 ದಿನಗಳು ಮುಚ್ಚಿದ್ದ ನಂತರ ಅಲ್ಲಿನ ಬಿಷಪ್ಪರ ಮಧ್ಯಸ್ಥಿಕೆಯಿಂದ ವೇತನ ಸಂಬಂಧೀ ಪ್ರಶ್ನೆಗಳ ಬಗ್ಗೆ ಒಪ್ಪಂದವಾಯಿತು. ಇದೂ ಅಂತೋಣಿಯವರ ಪಾಲಿಗೆ ಕಾನೂನು-ವ್ಯವಸ್ಥೆಯ ಸಮಸ್ಯೆ.

ಮೂರನೇಯ ಘಟನೆ ತಿರುವಪಾಡಿಯಲ್ಲಿ ನಡೆಯಿತು. INTUC ಗೆ ಸೇರಿದ 9 ಜನ ಹಾಗೂ ಸಿ.ಐ.ಟಿ.ಯು. ಗೆ ಸೇರಿದ 25 ಮಂದಿ ಸಾಮಾನುಹೊರುವವರು ದೊಡ್ಡ ಭೂಮಾಲಕರು ತಮ್ಮ ಮೂಲಕವೇ ಸಾಮಾನು ಹೊರಿಸಬೇಕೆಂಬ ಬೇಡಿಕೆಗೆ ಸಂಬಂಧಪಟ್ಟದ್ದು. ಅದನ್ನು ಮುರಿದು ಅತೀ ಕಮ್ಮಿಕೂಲಿಯಲ್ಲಿ ಕೆಲಸ ಮಾಡಿಸಿಕೊಳ್ಳಲು ಭೂಮಾಲಕರು ಒಂದು 'ಕರ್ಷಕ ರಕ್ಷಾ ಸಮಿತಿ' ಮಾಡಿಕೊಂಡರು. ಆಶ್ಚರ್ಯವೆಂದರೆ ಎರಡೂ ಕಾಂಗ್ರೆಸ್‌ಗಳೂ ತಮ್ಮ ಸಂಘಟನೆಗೆ ಸೇರಿದ ಕಾರ್ಮಿಕರ ಹಿತಾಸಕ್ತಿಯನ್ನು ಬಲಿಕೊಟ್ಟು ಭೂಮಾಲಕರ ಬೆಂಬಲಕ್ಕೆ ನಿಂತರು. ನಂತರ ಕಾರ್ಮಿಕ ಇಲಾಖೆಯ ಮಧ್ಯಪ್ರವೇಶದಿಂದ ಇದೂ ಕಾರ್ಮಿಕರ ಪರವಾಗಿ ಇತ್ಯರ್ಥವಾಯಿತು. ಕಾರ್ಮಿಕ ಇಲಾಖೆ ಕಾಂಗ್ರೆಸ್(ಎಸ್) ಅಧೀನವಿತ್ತು ಎಂಬುದು ಇಲ್ಲಿ ಗಮನಾರ್ಹ. ಆದರೆ ಅಂತೋಣಿಯವರಿಗೆ ಇದೂ ಒಂದು ಕಾನೂನು-ವ್ಯವಸ್ಥೆಯ ಸಮಸ್ಯೆ.

ಇವಿಷ್ಟನ್ನು ಬಿಟ್ಟು ಅಂತೋಣಿಯವರು ತಮ್ಮ ಸಮಸ್ಯೆಯ ಬಗ್ಗೆ ಸ್ಪಷ್ಟ ಉದಾಹರಣೆಗಳನ್ನು ಬೇರೆ ಕೊಟ್ಟಿಲ್ಲ. ಕಾರ್ಮಿಕರು, ರೈತರು ತಮ್ಮ ನ್ಯಾಯಪೂರ್ಣ ಬೇಡಿಕೆಗಳಿಗಾಗಿ ಒತ್ತಾಯ ಮಾಡುವುದು ಕಾಂಗ್ರೆಸ್ ಪಾಲಿಗೆ ಮೊದಲಿನಿಂದಲೂ ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಗಳೇ. ತುರ್ತು ಪರಿಸ್ಥಿತಿಯಲ್ಲಿ ಇದು ಎಲ್ಲರಿಗೂ ಗೊತ್ತಾಗುವಂತೆ ಪ್ರದರ್ಶಿತಗೊಂಡಿತ್ತು. ಪಟ್ಟಭದ್ರರ, ಶೋಷಕರ ಹಿತರಕ್ಷಣೆ ಮಾಡುವ ತನ್ನ ಬಯಕೆಯನ್ನಷ್ಟೇ ಅಂತೋಣಿಯವರು ಕಾನೂನು ವ್ಯವಸ್ಥೆಯ ಸಮಸ್ಯೆಯ ತನ್ನ ಆಲಾಪಗಳ ಮೂಲಕ ತೋರ್ಪಡಿಸಿಕೊಂಡಿದ್ದಾರೆ ಎಂಬುದು ಇದರಿಂದ ಸ್ಪಷ್ಟ. ಆದರೆ ಸಿ.ಪಿ.ಐ.(ಎಂ) ಇದಕ್ಕೆ ಎಂದೂ ಒಪ್ಪಲು ಸಾಧ್ಯವೇ ಇಲ್ಲ. ಪೋಲೀಸರನ್ನು ಪಟ್ಟಭದ್ರರ, ಶೋಷಕರ ಹಿತರಕ್ಷಣೆಗೆ ಉಪಯೋಗಿಸಲು ಸಿ.ಪಿ.ಐ.(ಎಂ) ಒಪ್ಪಲಿಲ್ಲ. ಅಲ್ಲದೆ ಕೇಂದ್ರ ಸರಕಾರದ ರಾಷ್ಟ್ರೀಯ ಭದ್ರತಾ ಶಾಸನ ಹಾಗೂ ಅಗತ್ಯ ಸೇವಾ ನಿರ್ವಹಣಾ ಶಾಸನವನ್ನು ಉಪಯೋಗಿಸಲೂ ಅದು ಒಪ್ಪಲಿಲ್ಲ. ಈ ಬಗ್ಗೆ ಅದಕ್ಕೆ ಹೆಮ್ಮೆಯಿದೆ. ಯಾಕೆಂದರೆ ಸರ್ವಾಧಿಕಾರೀ ವಿರೋಧಿ ನೀತಿಗಳ ಮೇಲೆ ಅದು ಚುನಾವಣೆ ಗೆದ್ದದ್ದು. ಆದರೆ ಅಂತೋಣಿಯವರು ತಮ್ಮ ಆಲಾಪಗಳ ಮೂಲಕ ಅದೇ ಸರ್ವಾಧಿಕಾರೀ ನೀತಿಗಳನ್ನು ಪರೋಕ್ಷವಾಗಿ ಬೆಂಬಲಿಸಿದರು.

ಮತ್ತೆ ಚುನಾವಣೆ ನಡೆಸಬೇಕು

ಯಾವ ಸರ್ವಸಮ್ಮತ ನೀತಿಗಳ ಆಧಾರದ ಮೇಲೆ ಎಡ-ಪ್ರಜಾಪ್ರಭುತ್ವರಂಗ ಸ್ಥಾಪನೆಗೊಂಡಿತ್ತೋ ಅವನ್ನು ಬದಲಿಸುವ ಅಗತ್ಯವೇನೂ ಬಂದಿರಲಿಲ್ಲ. ಬದಲಾಗಿ ಅವನ್ನು ಮತ್ತಷ್ಟು ಬಲಗೊಳಿಸುವ ಅವಶ್ಯಕತೆ ತಲೆದೋರಿತ್ತು. ಹೀಗಿದ್ದೂ ಕಾಂಗ್ರೆಸ್ (ಎಸ್) ಹಾಗೂ ಕೇರಳ ಕಾಂಗ್ರೆಸ್ (ಮಣಿ) ರಂಗದಿಂದ ಹೊರಹೋಗಲು ನಿರ್ಧರಿಸಿದ ಮೇಲೆ ತಮ್ಮ ನಿಲುವಿನ ಬಗ್ಗೆ ಜನತೆಯ ತೀರ್ಪನ್ನು ಪಡೆಯಲು ಸಿದ್ಧರಾಗಬೇಕು. ಆದರೆ ಅದಕ್ಕೆ ಅವು ತಯಾರಿದ್ದಂತಿಲ್ಲ. ಬದಲಾಗಿ ಕಾಂಗ್ರೆಸ್ (ಐ)ನ ರಾಜಕೀಯ ದುರ್ವ್ಯಾಪಾರಕ್ಕೆ ಕುಮ್ಮಕ್ಕು ಕೊಡುತ್ತಿವೆ. ಕೇರಳ ವಿಧಾನಸಭೆಯನ್ನು ವಿಸರ್ಜಿಸಿ ಮತ್ತೆ ಹೊಸ ಚುನಾವಣೆ ನಡೆಸಿ ಜನತೆಯ ಅಭಿಪ್ರಾಯ ತಿಳಿಯಬೇಕೆಂಬುದು ಸಿ. ಪಿ. ಐ. (ಎಂ)ನ ಒತ್ತಾಯ. ಯಾಕೆಂದರೆ ಆ ಮೂಲಕ ಮಾತ್ರ ಯಾರ ನಿಲುವು ಸರಿ, ಯಾರದು ತಪ್ಪು ಎಂದು ಇತ್ಯರ್ಥವಾಗುವುದು. ಇಂತಹ ಚುನಾವಣೆಗಳಲ್ಲಿ ಎಲ್ಲಾ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿಗಾಗಿ ಶ್ರಮಿಸಲು ಸಿ.ಪಿ.ಐ.(ಎಂ) ಈಗಲೂ ಸಿದ್ಧವಿದೆ. ಏಕೆಂದರೆ ಅದರಿಂದ ಮಾತ್ರವೇ ಕಾಂಗ್ರೆಸ್‌ನ ಸರ್ವಾಧಿಕಾರಿ ಒಲವುಗಳಿಗೆ ತಡೆಯೊಡ್ಡಿ ಜನತೆಯ ಹಕ್ಕುಗಳನ್ನು ರಕ್ಷಿಸಲು ಸಾಧ್ಯ. ಕೆಲವು ಪತ್ರಿಕೆಗಳು ಹಾಗೂ ಪಕ್ಷಗಳು ಭಾವಿಸಿರುವಂತೆ ಎಡ-ಪ್ರಜಾಪ್ರಭುತ್ವ ರಂಗದ ಪ್ರಯತ್ನ ಕೇರಳದ ಘಟನೆಯಿಂದಾಗಿ ವಿಫಲಗೊಂಡಿಲ್ಲ. ಎಡ-ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟನ್ನು ಸಾಧಿಸುವಲ್ಲಿ ಸ್ಥಳೀಯ ಸ್ಥಿತಿಗನುಸಾರವಾಗಿ ವ್ಯತ್ಯಾಸವಿರಲು ಸಾಧ್ಯ. ಉದಾಹರಣೆಗೆ ಪಶ್ಚಿಮ ಬಂಗಾಲದಲ್ಲಿ ಕಾಂಗ್ರೆಸ್ (ಎಸ್) ಮೊದಲಿನಿಂದಲೂ ರಂಗವನ್ನು ವಿರೋಧಿಸುತ್ತಿದ್ದರಿಂದ ಇಂತಹ ರಂಗದಲ್ಲಿ ಅದು ಇರಲು ಸಾಧ್ಯವಾಗಲಿಲ್ಲ.

ರೂಢಿಯಲ್ಲಿರುವ ಅಸ್ಪೃಶ್ಯತೆಯಂತಹ ಭೀಕರ ಅನ್ಯಾಯದ ಅರಿವಿನಿಂದಾಗಿ, ಅದನ್ನು ಖಂಡಿಸದೆ ತಮ್ಮ ವಿಮೋಚನಾ ಸಮರಕ್ಕೆ ಅವಶ್ಯಕವಾದ ಕನಿಷ್ಠ ಪ್ರಜಾಸತ್ತಾತ್ಮಕ ಶಕ್ತಿ ದೊರೆಯಲಿಕ್ಕಿಲ್ಲವೆಂಬ ಬೋಧೆಯಿಂದ ಕೂಡಿ, ರಾಷ್ಟ್ರೀಯ ಕಾಂಗ್ರೆಸ್ಸು ಈ ಸಮಸ್ಯೆಗೆ ವಿಶೇಷ ಗಮನವನ್ನಿತ್ತಿತ್ತು. ಅಸ್ಪೃಶ್ಯತೆಯು ಒಂದು ಪಾಪಕೃತ್ಯವೆಂದು ಸಾರಿತ್ತು. ಸ್ವಾತಂತ್ರ್ಯಾನಂತರ, ಅವರು ಎಲ್ಲಾ ಅಸ್ಪೃಶ್ಯರಿಗೆ ಸಮಾನ ಹಕ್ಕುಗಳನ್ನುಕೊಟ್ಟು, ಅಸ್ಪೃಶ್ಯತೆಯ ಆಚರಣೆಯು ಒಂದು ಕ್ರಿಮಿನಲ್ ಕೃತ್ಯವೆಂದು ಸಾರಿದರು. ಸಮಾನತೆಯ ಈ ಉದ್ದೇಶವನ್ನು ಮುಂದುವರಿಸುತ್ತಾ, ಹರಿಜನರಿಗೆ ವಿದ್ಯಾಭ್ಯಾಸದ ವಿಶೇಷ ಅನುಕೂಲತೆಗಳನ್ನು ಒದಗಿಸಿಕೊಡಲಾಯಿತು. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಅವರಿಗೆ ಪ್ರತ್ಯೇಕ ಸೀಟುಗಳನ್ನು ಕಾದಿರಿಸಲಾಯಿತು ಮತ್ತು ಸರಕಾರಿ ಸೇವೆಗಳಲ್ಲಿ ಸ್ಥಾನಗಳನ್ನು ಕಾದಿರಿಸಲಾಯಿತು.

ಯಾವುದೇ ರಾಜಕೀಯ ಪಕ್ಷವಾಗಲೀ ಈ ಸವಲತ್ತುಗಳನ್ನು ವಿರೋಧಿಸುವ ಅಥವಾ ಟೀಕಿಸುವ ಧೈರ್ಯ ತಾಳಲಿಲ್ಲ. ಎಲ್ಲರೂ ಒಪ್ಪಿಕೊಂಡು ನಡುವ ನಡೆಯುವ ಹೋರಾಟದ ಫಲವಾಗಿ, ಹರಿಜನರಿಗೆ ವಿಶೇಷ ಸವಲತ್ತುಗಳಿರಬೇಕೆಂಬ ಬರವಣಿಗೆಯುಳ್ಳಿಲ್ಲದ ಒಮ್ಮತವು- ಈ ಪ್ರಶ್ನೆಯನ್ನು ಒಂದು ಚುನಾವಣಾ ಪ್ರಶ್ನೆಯನ್ನಾಗಿ ಮಾಡಬಾರದೆಂಬ ಒಮ್ಮತವು- ಈಗ ಕೊನೆಗೊಂಡಿದೆ.

ಕಾಂಗ್ರೆಸ್ (ಐ) ಪಕ್ಷವು ರಾಜ್ಯಾಧಿಕಾರವನ್ನು ಕೈಯಲ್ಲಿ ಹಿಡಿದುಕೊಂಡು, ಸವಲತ್ತುಗಳನ್ನುಕೊಟ್ಟು ಹರಿಜನರ ಮತಗಳನ್ನು ತಾನು ಪಡೆದುಕೊಳ್ಳಲಿಕ್ಕೆ ಉಪಯೋಗಿಸಿಕೊಳ್ಳಬಹುದಾದರೆ, ಬಂಡವಾಳಶಾಹಿ ವಿರೋಧ ಪಕ್ಷಗಳು ಹರಿಜನರ ವಿರುದ್ಧ ಇತರ ಜನವಿಭಾಗಗಳನ್ನು ಎತ್ತಿಕಟ್ಟಿ, ಹರಿಜನರು ಕಾಂಗ್ರೆಸ್ (ಐ) ಉದಾರತೆಯ ಪ್ರತಿಫಲಾಪೇಕ್ಷೆಯುಳ್ಳವರೆಂದು ಪರಿಗಣಿಸಿದವು.

ಜಾತಿ ಮತ್ತು ಹರಿಜನ ವಿರೋಧಿ ಭಾವನೆಗೆ ನೇರವಾಗಿ ಕರೆಕೊಡುತ್ತಿರುವುದು ಒಂದು ಅಪಾಯಕಾರಿ ಬೆಳವಣಿಗೆ. ಆಳುವವರ್ಗಗಳ ಹಿತಕ್ಕಾಗಿ ದುಡಿಯುವ ಜನವಿಭಾಗಗಳನ್ನು ಈ ಮೂಲಕ ವಿಭಜಿಸುವಂತಾಗಿದೆ.

ಗುಜರಾತ್ ಪ್ರಕ್ಷೋಭೆಯು ಮೂರು ತಿಂಗಳುಗಳ ಕಾಲ ನಡೆ ಸುಗಳನ್ನೆಲ್ಲಾ ತಮ್ಮ ಏಕಸ್ವಾಮ್ಯದಲ್ಲಿರಿಸಿಕೊಂಡಿದ್ದ ಮೇಲ್ಜಾತಿಯವರ ಗಮನವನ್ನು ಸೆಳೆದಿತ್ತು. ಹರಿಜನರು ಇದನ್ನು ಮೇಲ್ಜಾತಿಯವರ ಸರ್ವೀಸು ಏಕಸ್ವಾಮ್ಯದ ವಿರುದ್ಧ ಒಂದು ಪ್ರತಿರೋಧವೆಂದು ತಿಳಿದಿದ್ದರು.

ಆದರೆ, ಇತ್ತೀಚಿಗಿನ ವರ್ಷಗಳಲ್ಲಿ ವಸ್ತುಸ್ಥಿತಿ ತೀರಾ ಬದಲಾಗಿದೆ. ಜನಸಂಖ್ಯೆಯ ಒಟ್ಟು ಶೇಕಡಾ 21 ರಷ್ಟು ಹರಿಜನರು ಮತ್ತು ಗಿರಿಜನರು ಬಡತನರೇಖೆಗಿಂತ ಕೆಳಗಿರುವುದಾದರೂ, ಬಡತನದ ರೇಖೆಗಿಂತ ಕೆಳಗೆ ಜೀವಿಸುತ್ತಿರುವ ಇತರ ವಿಭಾಗಗಳವರ ಜನಸಂಖ್ಯೆ ಶೇಕಡಾ 27ಕ್ಕಿಂತ ಕಡಿಮೆ ಇರಲಿಲ್ಲ. ಈ ಹಿಂದುಳಿದ ವಿಭಾಗಗಳಿಗೆ ಯಾವ ವಿಧದಲ್ಲೂ ಸರಕಾರಿ ಸೇವೆಗಳು ಸಿಗುತ್ತಿರಲಿಲ್ಲ. ಅವರು ಈಗ ತಮ್ಮ ವಿದ್ಯಾವಂತ ವಿಭಾಗಗಳಿಗೆ ಎಲ್ಲೆಡೆ ಸರಕಾರಿ ಸರ್ವೀಸುಗಳನ್ನು ಹುಡುಕುವವರಾಗಿದ್ದಾರೆ.

ಅಲ್ಲದೆ, ಕಳೆದ ಮೂರು ದಶಕಗಳಲ್ಲಿ ಜನತೆಯು ಸಂಪೂರ್ಣ ಬಡತನಕ್ಕೆ ದೂಡಲ್ಪಟ್ಟಿದೆ. ಮೊಟ್ಟಮೊದಲು ಈ ರೀತಿ ತೀವ್ರ ಬಡತನಕ್ಕೆ ದೂಡಲ್ಪಟ್ಟವರು ಆದಿವಾಸಿಗಳು. ಕರಿಸಲ್ಪಟ್ಟಿರುವುದರಿಂದ. ಅದರಲ್ಲೂ ವಿದ್ಯಾವಂತ ನಿರುದ್ಯೋಗಿಗಳೂ ಕೇಂದ್ರೀಕರಿಸಲ್ಪಟ್ಟಿರುವುದರಿಂದ, ಅತೃಪ್ತಿಯು ಬಹಳ ವಿಸ್ತಾರವಾಗಿ ಬೆಳೆದಿದೆ. ಅದು ಯಾವುದೇ ವಿಚ್ಛಿದ್ರಕಾರಿ ದಾರಿಗಳಲ್ಲಿ ಪ್ರೇರಿತವಾಗಲು ತಯಾರಾಗಿ ನಿಂತಂತಿದೆ.

ಈ ಹಿನ್ನೆಲೆಯಲ್ಲಿ, ಹರಿಜನರಿಗೆ ನಾವು ವಿಶೇಷ ಸವಲತ್ತುಗಳನ್ನೂ ಅನುಕೂಲತೆಗಳನ್ನೂ ಒದಗಿಸಿಕೊಟ್ಟಿದ್ದೇವೆಂದು ಕಾಂಗ್ರೆಸ್ (ಐ) ಡಂಗುರ ಹೊಡೆಯುವಾಗ, ಅವರ ವಿರುದ್ಧ ಆರ್ಥಿಕ ಅತೃಪ್ತಿಯು ತಿರುಗುವುದಕ್ಕೆ ಅನುಕೂಲ ಪರಿಸ್ಥಿತಿ ಉಂಟಾಯಿತು. ಗುಜರಾತ್ ಚಳುವಳಿಯು ಈಗ ತಾತ್ಕಾಲಿಕವಾಗಿ ಹಿಂದೆ ತೆಗೆಯಲ್ಪಟ್ಟಿರುವುದಾದರೂ, ಅದು ಇತರ ರಾಜ್ಯಗಳಿಗೆ ಹರಡುವುದು ಈಗ ನಿಂತಿರುವುದಾದರೂ, ಈ ಸವಾಲು ಪುನಃಪುನಃ ಏಳುವುದಂತೂ ಖಂಡಿತ.

ನಿರುದ್ಯೋಗ ಪರಿಸ್ಥಿತಿಯು ವರ್ಷದಿಂದ ವರ್ಷಕ್ಕೆ ಹದಗೆಡುತ್ತಾ ಹೋಗುವುದೇ ಇದಕ್ಕೆ ಕಾರಣ. ಚುನಾವಣಾ ಬೆಂಬಲಾರ್ಥವಾಗಿ ಬಂಡವಾಳಶಾಹಿ ವಿರೋಧ ಪಕ್ಷಗಳು ಕ್ರಾಂತಿಕಾರಿ ಚಳುವಳಿಯು ಬೆಳೆಯುವುದರಲ್ಲಿ ವಿಫಲವಾದ ಕಾರಣ, ಹರಿಜನರೂ ಹರಿಜನರೇತರರೂ ಭಾಗವಹಿಸುವ ಸಾಮಾನ್ಯ ಹೋರಾಟದ ಬೆಳವಣಿಗೆಯು ತಡೆಹಿಡಿಯಲ್ಪಟ್ಟಿತು. ಹರಿಜನರು ಮತ್ತು ಹರಿಜನರೇತರರು ಭಾಗವಹಿಸುವ ಹೋರಾಟದ ಬೆಳವಣಿಗೆಯ ಮೂಲಕ ಮತ್ತು ಈ ಜನವಿಭಾಗಗಳನ್ನು ವಿಭಜಿಸುವ ಅಂತರವನ್ನು ಭರ್ತಿಮಾಡಬಹುದಷ್ಟೆ.

ನಮ್ಮ ಸಾಮೂಹಿಕ ಸಂಘಟನೆಗಳಿಂದ ದಿನನಿತ್ಯ ನಡೆಸಲ್ಪಡುತ್ತಿರುವ ಸಾಮಾನ್ಯ ಹೋರಾಟಗಳು ಹರಿಜನರ ವಿಶೇಷ ಸಮಸ್ಯೆಗಳ ಬಗ್ಗೆ, ದುಡಿಯುವ ಹರಿಜನರ ಸಮಸ್ಯೆಗಳ ಬಗ್ಗೆ, ಸಹಾನುಭೂತಿಯನ್ನು ತಳೆಯದಿದ್ದುದರಿಂದಾಗಿ, ಈ ವಿಭಾಗಗಳಲ್ಲಿ ಸಾಮಾನ್ಯ ವರ್ಗಹೋರಾಟದ ಬಗ್ಗೆ ಅಸಡ್ಡೆಯುಂಟಾಯಿತು. ಸರ್ವಾಧಿಕಾರಿ ಪಕ್ಷಕ್ಕೆ ಈ ಪ್ರಜಾಸತ್ತಾತ್ಮಕ ವಿಭಾಗವು ಬೆಂಗಾವಲಾಗಿ ನಿಲ್ಲದಂತಾಗಬೇಕಾದರೆ, ನಮ್ಮ ಬಲಹೀನತೆಗಳನ್ನು ಹೋಗಲಾಡಿಸಬೇಕು. ವಿಸ್ತೃತ ವಿಭಾಗಗಳ ಜನಸಮೂಹಗಳಲ್ಲಿರುವ ಜಾತೀಯತೆ ಮತ್ತು ಅವರಿಂದ ಅನುಸರಿಸಲ್ಪಡುತ್ತಿರುವ ಅಸ್ಪೃಶ್ಯತೆ ಅತಿ ದೊಡ್ಡ ಆತಂಕವಾಗಿದೆ. ಇದರಿಂ

ಹರಿಜನರ ಸಮಸ್ಯೆ

ಮಾರ್ಕ್ಸ್‌ವಾದಿ ಪಕ್ಷದ ಒಂದು ವಿಶ್ಲೇಷಣೆ

ಬಂದ ಧೋರಣೆಗಳಾದವು. ಬಂಡವಾಳಶಾಹಿ ಭೂಮಾಲಕ ಪಕ್ಷಗಳಲ್ಲಿ ಇದೊಂದು 'ರಾಷ್ಟ್ರೀಯ ಒಮ್ಮತ'ದ ವಿಷಯವಾಗಿತ್ತು.

ಈ ಒಪ್ಪಂದವು ಮೂರು ದಶಕಗಳ ಕಾಲ ಮುಂದುವರಿಯಿತು. ಇದಕ್ಕೆ ಮೂರು ಕಾರಣಗಳಿದ್ದವು. ಒಂದನೇಯದು, ಅದು ಹರಿಜನರ ಬಗ್ಗೆ ರಾಷ್ಟ್ರೀಯ ಕಾಂಗ್ರೆಸ್ಸಿನ ಒಂದು ಪರಂಪರೆ, ಆ ಮೂಲಕ ರಾಷ್ಟ್ರೀಯ ಪರಂಪರೆ. ಎರಡನೇಯದು, ಎಲ್ಲರಿಗೂ ಚುನಾವಣೆಗಳಲ್ಲಿ ಹರಿಜನರ ಬೆಂಬಲ ಬೇಕಾಗಿದ್ದುದರಿಂದ ಅದು ಎಲ್ಲರಿಗೂ ಅವಶ್ಯಕವಾಗಿತ್ತು. ಮೂರನೇಯದು, ಇತ್ತೀಚಿಗಿನ ಕಾಲದಲ್ಲಿ ಉದ್ಯೋಗಗಳ ಮತ್ತು ನಿರುದ್ಯೋಗ ಪರಿಸ್ಥಿತಿಯು ತೀವ್ರವಾಗಿರುವಷ್ಟು ಎಂದೂ ಇರಲಿಲ್ಲ. ಆದಕಾರಣ, ಮೀಸಲಾತಿಯ ಧೋರಣೆಯ ವಿರುದ್ಧ ಭಾವನೆಯನ್ನು ಎಬ್ಬಿಸಿ, ಚುನಾವಣೆಯಲ್ಲಿ ಬೆಂಬಲ ಪಡೆಯಲಿಕ್ಕೆ ಸಾಧ್ಯತೆ ಇರಲಿಲ್ಲ. ಆದರೆ ಗುಜರಾತ್‌ನಲ್ಲಿ ನಡೆದ ಪ್ರಕ್ಷೋಭೆ, ಅದರಲ್ಲಿ ಸಂಭವಿಸಿದ ಸಾವುನೋವು ಮತ್ತು ಸಾಮೂಹಿಕ ಕೋಪೋದ್ರೇಕಗಳನ್ನು ನೋಡಿದರೆ, ಬಂಡವಾಳಶಾಹಿ ಪಕ್ಷಗಳ ನಡುವೆ ಈ ಒಮ್ಮತವು ಅಂತ್ಯವಾದಂತಿದೆ. ಸರಕಾರಿ ಅಧಿಕಾರಕ್ಕಾಗಿ ಈ ಬಂಡವಾಳಶಾಹಿ-ಭೂಮಾಲಕ ಪಕ್ಷಗಳ ಯಿತು. ಈ ಕಾಲದುದ್ದಕ್ಕೂ ಎಲ್ಲಾ ಮುಖ್ಯ ನಗರಗಳು ಒಂದಲ್ಲ ಒಂದು ಸಮಯದಲ್ಲಿ "ಕರ್ಫ್ಯೂ"ಗೆ ಒಳಪಡಿಸಲ್ಪಟ್ಟಿದ್ದವು. ಪೋಲೀಸರು ಪುನಃ ಪುನಃ ಗೋಲೀಬಾರು ಮಾಡಲು ನಿರ್ಬಂಧಿಸಲ್ಪಟ್ಟಿದ್ದರು. ಸುಮಾರು 45 ಮಂದಿ ಗೋಲೀಬಾರಿಗೆ ತುತ್ತಾದರು.

ಆರಂಭದಲ್ಲಿ, ಪೋಲೀಸರ ಹಿಂಸಾಕೃತ್ಯಗಳಿಗೆ ಹರಿಜನರು ಅತಿ ಹೆಚ್ಚು ತುತ್ತಾಗಿದ್ದರು. ಆನಂತರ ಬಹುಶಃ ಎಲ್ಲರನ್ನೂ ಪೋಲೀಸರು ಹೊಡೆಯಲು ಶುರುಮಾಡಿದರು....

ಹಾಳಾಗುತ್ತಿರುವ ಸ್ಥಿತಿಗತಿ ಕಾರಣವಾಗಿಯೂ, ಇತ್ತೀಚಿಗಿನ ವರ್ಷಗಳಲ್ಲಿ ಅಧಿಕಗೊಳ್ಳುತ್ತಿರುವ ಸಾಮೂಹಿಕ ನಿರುದ್ಯೋಗದ ಕಾರಣವಾಗಿಯೂ, ಬಂಡವಾಳಶಾಹಿ ಭೂಮಾಲಕ ಆಡಳಿತೆಯ ಬಲಿಪಶುಗಳಾಗಿ ಎರಡು ವಿಭಾಗಗಳ ಜನತೆ ವಿಭಜಿಸಲ್ಪಟ್ಟು ಈ ರೀತಿ ಪರಸ್ಪರ ಎದುರುಬದುರಾಗಿ ಹೋರಾಡುವ ಸಾಧ್ಯತೆ ಉಂಟಾಗಿದೆ.

ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟಿರುವುದಕ್ಕೆ ಪ್ರಾಯಶ್ಚಿತ್ತವೆಂಬಂತೆ ಸರ್ವೀಸುಗಳ ಮೀಸಲಾತಿ ಧೋರಣೆಯು ಆರಂಭವಾಗಿ, ಅದು ಸರ್ವೀ ಎಷ್ಟು ರಕ್ಷಕ ಕಾನೂನುಗಳಿದ್ದಾಗ್ಯೂ, ಅವರ ಭೂಮಿಯು ಪರಭಾರೆಯಾಗಿಹೋಗಿದೆ. ಹಾಗೆಯೇ ಹರಿಜನರದ್ದು.

ಆದರೆ, ಆನಂತರದ ಕಾಂಗ್ರೆಸ್ ಭೂಸುಧಾರಣೆಗಳ ಫಲವಾಗಿ, ಲಕ್ಷಗಟ್ಟಲೆಯಲ್ಲಿ ಇತರ ದುಡಿಯುವ ಜನತೆ ತಮ್ಮ ಭೂಮಿಯನ್ನು ಕಳೆದುಕೊಂಡಿತು. ಅಲ್ಲದೆ, ಆಧುನೀಕರಣ ಮತ್ತು ಬಂಡವಾಳಶಾಹಿ ಪೈಪೋಟಿಯ ಫಲವಾಗಿ ಅದು ತಮ್ಮ ಪರಂಪರಾಗತ ವೃತ್ತಿಕಸುಬುಗಳನ್ನು ಕಳೆದುಕೊಂಡಿತು.

ತತ್ಪರಿಣಾಮವಾಗಿ, ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಿಯಿಲ್ಲದ ಮತ್ತು ಕೆಲಸವಿಲ್ಲದ ಹರಿಜನರೇತರ ಜನರು ದೊಡ್ಡ ಸಂಖ್ಯೆಯಲ್ಲಿ 'ಸೃಷ್ಟಿ'ಯಾಗಿದ್ದಾರೆ. ಹಿಂದುಳಿದ ಜಾತಿಗಳ ಹಿತರಕ್ಷಣೆಯಾಗಬೇಕೆಂಬ ಕೂಗು, ಈ ಜಾತಿಗಳವರಿಗೂ ಸರ್ವೀಸು ಕಾದಿರಿಸಲ್ಪಡಬೇಕೆಂಬ ಕೂಗು, ದೇಶದ ಹಲವೆಡೆಗಳಲ್ಲಿ ಈಗ ಚಿರಪರಿಚಿತ. ಭೂಮಿಗಾಗಿ, ಕೆಲಸಕ್ಕಾಗಿ, ಆರ್ಥಿಕ ಸಹಾಯಕ್ಕಾಗಿ, ಸಾಲಕ್ಕಾಗಿ, ವಿದ್ಯಾಭ್ಯಾಸ ಅನುಕೂಲತೆಗಳಿಗಾಗಿ ಪೈಪೋಟಿಯು ಈಗ ಜಾತಿಜಾತಿಗಳ ನಡುವಿನ ಹೋರಾಟವಾಗಿ ಪರಿಣಮಿಸಿದೆ. ನಗರಗಳಲ್ಲಿ ಕೆಲಸವಿಲ್ಲದವರು ಕೇಂದ್ರೀ ವಿಭಜನಾಘೋಷಣೆಯನ್ನು ಉಪಯೋಗಿಸುವುದಂತೂ ಖಂಡಿತ. ಕಾರ್ಮಿಕವರ್ಗ, ಸಿ. ಪಿ. ಐ. (ಎಂ) ಮತ್ತು ಇತರ ಎಡಶಕ್ತಿಗಳು ಈ ವಿಭಜನಾ ಘೋಷಣೆಯನ್ನು ಎದುರಿಸಿ ಹೋರಾಡುವುದಕ್ಕೆ ಹೊಸ ವಿಧಾನಗಳನ್ನು ಕಂಡುಹಿಡಿಯಬೇಕಾಗಿದೆ.

ಮೀಸಲಾತಿಯ ಪ್ರಶ್ನೆಯನ್ನು ಇನ್ನು ಮುಂದೆ ಕೇವಲ ಹಿಂದೂ ಸಾಮಾಜಿಕ ಸುಧಾರಣೆಯ ಪ್ರಶ್ನೆಗಾಗಿ ಪರಿಗಣಿಸಲು ಸಾಧ್ಯವಿಲ್ಲ. ಅರ್ಥವಿಲ್ಲದ ಭೂ-ಸಂಬಂಧಗಳ ವಿರುದ್ಧದ ಸಾಮಾನ್ಯ ಹೋರಾಟಕ್ಕೂ ಈ ಪ್ರಶ್ನೆಗೂ ನೇರಸಂಬಂಧವಿದೆ. ನಿರುದ್ಯೋಗದ ವಿರುದ್ಧದ ಚಳುವಳಿಗೂ ಈ ಪ್ರಶ್ನೆಗೂ ಸಂಬಂಧವಿದೆ. ಅಲ್ಲದೆ, ಒಂದು ಹೊಸ ಸಾಮಾಜಿಕ-ಆರ್ಥಿಕ ವ್ಯವಸ್ಥೆಯಡಿಯಲ್ಲಿ ತೀವ್ರ ಕೈಗಾರಿಕಾ ಬೆಳವಣಿಗೆಗೂ ಈ ಪ್ರಶ್ನೆಗೂ ಸಂಬಂಧವಿದೆ.

ಅಸ್ಪೃಶ್ಯತೆಯ ಸಮಸ್ಯೆಯ ಬಗ್ಗೆ ಕಮ್ಯೂನಿಸ್ಟ್ ಪಕ್ಷಕ್ಕೆ ಸ್ಥಾಪನೆಯಾದುದಿನಿಂದ ಸರಿಯಾದ ತಿಳುವಳಿಕೆ ಇದೆ. ಅಸ್ಪೃಶ್ಯತೆಯು ಕಾರ್ಮಿಕ ಕ್ರಾಂತಿಯ ಪ್ರಶ್ನೆಗೆ ಸಂಬಂಧಿಸಿದ ಪ್ರಶ್ನೆಯಾಗಿರುತ್ತದೆ. ಆದರೆ ಕಾರ್ಮಿಕ ಕ್ಷೇತ್ರದಲ್ಲೂ, ದೇಶದಲ್ಲಿ ಒಟ್ಟಾಗಿ ದಾಗಿ ಹರಿಜನ ಸಮೂಹಗಳು ಪ್ರತ್ಯೇಕವಾಗಿಯೇ ಉಳಿದಿವೆ.

ನಮ್ಮ ಪಕ್ಷ ಮತ್ತು ನಮ್ಮ ಮುಂದಾಳುತ್ವದಲ್ಲಿರುವ ಸಂಘಟಿತ ಟ್ರೇಡ್‌ಯೂನಿಯನ್‌ಗಳು ಕಾರ್ಮಿಕ ಜಾಗೃತಿಯ ಸ್ಫೂರ್ತಿಯಲ್ಲಿ, ಕಾರ್ಮಿಕ ಸಮುದಾಯಗಳಲ್ಲಿ ಬಲವಾದ ಜಾತಿ ವಿರೋಧ ಭಾವನೆಯನ್ನುಂಟುಮಾಡುವುದರಲ್ಲಿ ಜಯಶೀಲರಾಗಿಲ್ಲ. ಆದ್ದರಿಂದ, ಸ್ವಾಭಾವಿಕವಾಗಿಯೇ, ನಮ್ಮ ರೈತಸಂಘಟನೆ ಮತ್ತು ಕೃಷಿಕೂಲಿಗಾರರ ಸಂಘಟನೆಗಳು ಯಶಸ್ವಿಯಾಗಲು ಸಾಧ್ಯವಾಗಲಿಲ್ಲ.

ಗುಜರಾತ್‌ನಲ್ಲಿ ಮೀಸಲಾತಿಯ ವಿರುದ್ಧ ನಡೆದ ಚಳುವಳಿ ಮತ್ತು ಇತರ ರಾಜ್ಯಗಳಲ್ಲಿ ಅದಕ್ಕೆ ದೊರೆಯಬಹುದಾದ ಬೆಂಬಲ, ಇತರ ದುಡಿಯುವ ಜನವಿಭಾಗಗಳಲ್ಲಿ ಹರಿಜನರ ವಿರುದ್ಧ ಪ್ರತಿರೋಧವನ್ನು ಬೆಳೆಸಲಿರುವ ಸಾಧ್ಯತೆಯ ಅಪಾಯವನ್ನು ಎತ್ತಿತೋರಿಸಿದೆ. ಈ ವಸ್ತುಸ್ಥಿತಿಯನ್ನು ಹರಿಜನ ಮುಂದಾಳುಗಳೂ ಕಂಡುಕೊಳ್ಳಬೇಕು. ಹರಿಜನರಿಗೆ ವಿಶೇಷ ಸವಲತ್ತುಗಳನ್ನೂ ಅನುಕೂಲತೆಗಳನ್ನೂ ನಾವು ಕೊಡುತ್ತಿದ್ದೇವೆ ಎಂದು ಅತೀ ಪ್ರಚಾರ

(5ನೇ ಪುಟ ನೋಡಿ)

ಸುಳ್ಯದಲ್ಲಿ ಬೆಳೆಯುತ್ತಿರುವ ಹೋರಾಟ, ಹೆಚ್ಚುತ್ತಿರುವ ದಬ್ಬಾಳಿಕೆ

ತಾರೀಕು 3-11-81 ರಂದು ಸುಳ್ಯ ತಾಲ್ಲೂಕಿನ ರೈತರು ಹಾಗೂ ಕೃಷಿಕೂಲಿಗಾರರು ಮತ್ತು ಕಾರ್ಮಿಕರು ಬೃಹತ್ ಮತಪ್ರದರ್ಶನ ನಡೆಸಿದರು. ತಹಶೀಲ್ದಾರರಿಗೆ ಮನವಿ ಅರ್ಪಿಸಿದರು. ಅನಿರ್ದಿಷ್ಟಾವಧಿಯ ರೈತರ ಹೋರಾಟಕ್ಕೆ ಕೊಟ್ಟ ಕರೆಯಂತೆ ಸಾವಿರಾರು ಸಂಖ್ಯೆಯಲ್ಲಿ ರೈತ–ಕಾರ್ಮಿಕ–ಕೃಷಿಕೂಲಿಕಾರರು ಇದರಲ್ಲಿ ಭಾಗವಹಿಸಿದ್ದರು. ಸುಳ್ಯದ ನಾಗರಿಕರ ಅಭಿಪ್ರಾಯದಂತೆ ಕಳೆದ ಹಲವಾರು ವರುಷಗಳಲ್ಲಿ ನಡೆದ ಅತೀ ದೊಡ್ಡ ಪ್ರದರ್ಶನ ಇದಾಗಿತ್ತು.

ರೈತರ ಬೇಡಿಕೆಯನ್ನು ಬೆಂಬಲಿಸಿ ಸಿ. ಐ. ಟಿ. ಯು.ಗೆ ಸೇರಿದ ತೋಟ ಕೆಲಸಗಾರರ ಸಂಘ ಮತ್ತು ಬೀಡಿ ಕೆಲಸಗಾರರ ಸದಸ್ಯರು ಆ ದಿನ ಸಾಂಕೇತಿಕ ಮುಷ್ಕರ ನಡೆಸಿದ್ದರು. ಮತ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ತೋಟಕಾರ್ಮಿಕರು ಮತ್ತು ಬೀಡಿ ಕೆಲಸಗಾರರು ಆ ದಿನ ದೇಶದಾದ್ಯಂತ ನಡೆದ ಪ್ರತಿಭಟನೆಯಂತೆ ಮನವಿ ಅರ್ಪಿಸಿದರು.

ಸಂಜೆ ನಡೆದ ಬಹಿರಂಗ ಸಭೆಯ ಅಧ್ಯಕ್ಷ ಸ್ಥಾನವನ್ನು ಸುಳ್ಯ ತಾಲ್ಲೂಕು ರೈತಹೋರಾಟ ಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣ ಭಟ್ ವಹಿಸಿದ್ದರು. ಹೋರಾಟ ಸಮಿತಿ ಕಾರ್ಯದರ್ಶಿ ಕಾಂ. ಮೋನಪ್ಪ ಗೌಡರು ಸ್ವಾಗತಿಸಿದರು. ಕರ್ನಾಟಕ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ರಾಮಚಂದ್ರ ರಾವ್ ಮತ್ತು ದ. ಕ. ಜಿಲ್ಲಾ ರೈತ ಸಂಘದ ಪ್ರಧಾನಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಪುತ್ತೂರು ತಾಲ್ಲೂಕು ರೈತಸಂಘದ ಉಪಾಧ್ಯಕ್ಷ ಕಾಂ. ಬಿ. ರಾಮಕೃಷ್ಣನವರು ದೀರ್ಘ ಹೋರಾಟಕ್ಕೆ ಪುತ್ತೂರು ತಾಲ್ಲೂಕಿನ ರೈತರ ಬೆಂಬಲ ಸೂಚಿಸಿದರು. ಬೀಡಿಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಸರಸ್ವತಿಯವರ ಕ್ರಾಂತಿಗೀತೆಯೊಂದಿಗೆ ಹಾಗೂ ಕಾಂ. ಪಿ. ಕೆ. ಮೂಸಾ (ಹೋರಾಟ ಸಮಿತಿ ಖಜಾಂಚಿ) ಅವರ ಧನ್ಯವಾದಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಎರಡನೇ ಹಂತದ ಹೋರಾಟ ಕಾರ್ಯಕ್ರಮವಾಗಿ 4-11-1981ರಿಂದ ಗ್ರಾಮ ಗ್ರಾಮಗಳ ರೈತರು ಸರದಿ ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ. ರೈತರ ಹೋರಾಟದಿಂದ ಕಂಗೆಟ್ಟ ಭೂಮಾಲಕವರ್ಗ ಮತ್ತು ಅವರ ಏಜೆಂಟ್‌ಗಳಾದ ಭ್ರಷ್ಟ ನ್ಯಾಯ ಮಂಡಳಿಗಳ ಸದಸ್ಯರುಗಳು ಗೂಂಡಾಗಳ ಸಹಾಯದಿಂದ ಹೋರಾಟವನ್ನು ಮುರಿಯಲು ಮುಖಂಡರ ಮೇಲೆ ಹಲ್ಲೆ ಮತ್ತು ಕೊಲೆಯತ್ನಗಳನ್ನು ನಡೆಸುವ ಸತತ ಪ್ರಯತ್ನದಲ್ಲಿ ತೊಡಗಿದ್ದಾರೆ.

ಸುಳ್ಯ ತಾಲ್ಲೂಕು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಗಳೂ, ಸಿ. ಐ. ಟಿ. ಯು. ಮುಖಂಡರೂ, ಸುಳ್ಯ ತಾಲ್ಲೂಕು ರೈತ ಹೋರಾಟ ಸಮಿತಿಯ ಅಧ್ಯಕ್ಷರೂ ವಕೀಲರೂ ಆಗಿರುವ ಕಾಂ. ಸೂರ್ಯನಾರಾಯಣ ಭಟ್‌ರವರ ಮೇಲೆ ಕಳೆದ ಒಂದು ತಿಂಗಳ ಅವಧಿಯಲ್ಲಿ ಭೂಮಾಲಕರ ಗೂಂಡಾಗಳು ಮೂರು ಬಾರಿ ಹತಾಶ ಹಲ್ಲೆ ಮತ್ತು ಕೊಲೆ ಯತ್ನಗಳನ್ನು ನಡೆಸಿದರು ಮತ್ತು ಇನ್ನೂ ಇದಕ್ಕೆ ಬೇಕಾದ ಪಿತೂರಿಗಳು ನಡೆಯುತ್ತಲೇ ಇವೆ.

ತಾ. 3–11–81 ರಂದು ಕಾಂ. ಸೂರ್ಯನಾರಾಯಣ ಭಟ್‌ರವರು ಸಭೆ ಮುಗಿದು ರಾತ್ರಿ 9 ಗಂಟೆಗೆ ಮೋಟಾರ್ ಸೈಕಲಿನಲ್ಲಿ ಮನೆಕಡೆ ಹೋಗುತ್ತಿದ್ದರು. ರಾತ್ರಿ, ಅದೇ ಮಾರ್ಗದಲ್ಲಿ (ಕಾಡುದಾರಿ) ಅವರ ಮನೆ ಹತ್ತಿರದ, ಸುಳ್ಯದಲ್ಲಿ ಚೇತನ ಪವರ್ ಪ್ರೆಸ್ ನಡೆಸುತ್ತಿರುವ ಶ್ರೀ ದಯಾನಂದ ಎಂಬುವರು ಮೋಟಾರ್ ಸೈಕಲಿನಲ್ಲಿ ಮನೆಕಡೆ ಹೋಗುತ್ತಿದ್ದರು. ರಾತ್ರಿಹೊತ್ತು ದಾರಿಗಡ್ಡವಾಗಿ ನಿಂತ ಗೂಂಡಾಗಳು ಕಾಂ. ಸೂರ್ಯನಾರಾಯಣ ಭಟ್ ಬಂದರೆಂದು ತಿಳಿದು ಅವರ ಮೇಲೆ ಕಬ್ಬಿಣದ ಸಲಾಕಿಗಳಿಂದ ಹಲ್ಲೆ ನಡೆಸಿ ಪರಾರಿಯಾದರು.

ಕೂಡಲೇ ವಿಷಯ ತಿಳಿದ ಸುಳ್ಯ ಪೋಲೀಸ್ ಸ್ಟೇಷನ್ನಿನ ಎಸ್. ಐ. ಯವರು ಮತ್ತು ಸಿಬ್ಬಂದಿಯವರು ಸುಮಾರು 150 ಮಂದಿ ಸ್ಥಳೀಯ ಜನರೊಂದಿಗೆ ಆ ಪ್ರದೇಶವನ್ನು ಶೋಧಿಸಿದರು. ಅಪರಾಧಿಗಳು ಸಿಗದೆ ಪರಾರಿಯಾಗಿದ್ದಾರೆ. ಇದರ ಬಗ್ಗೆ ಪೋಲೀಸಿಗೆ ದೂರು ನೀಡಲಾಗಿದೆ. ಕಳೆದ ಒಂದು ತಿಂಗಳಲ್ಲಿ ದೊಡ್ಡ ಭೂಮಾಲಕರು ಇದೇ ರೀತಿ 2 ಸಲ ಪ್ರಯತ್ನ ನಡೆಸಿದ್ದರು.

"ರೈತಕಾರ್ಮಿಕರು ಒಗ್ಗಟ್ಟಾಗಿ ಹೋರಾಟ ನಡೆಸಿದರೆ ತಮ್ಮ ಬಣ್ಣ ಬಯಲಾಗುವುದೆಂದು ಹೆದರಿ ಹೋರಾಟದ ಮುಖಂಡರನ್ನು ಮುಗಿಸುವ ಯೋಜನೆ ಇದ್ದರೆ ಅದರಿಂದ ಏನೂ ಪ್ರಯೋಜನ ಆಗದು. ಬದಲಾಗಿ ಇದಕ್ಕೆ ಸರಿಯಾದ ಉತ್ತರವನ್ನು ಸಂಘಟಿತ-ರೈತಕಾರ್ಮಿಕರು ಕೊಡುವರೆಂಬುದರಲ್ಲಿ ಸಂಶಯವಿಲ್ಲ".

○

ಮಾರ್ಕ್ಸ್‌ವಾದಿ ಪಕ್ಷದ ಒಂದು ವಿಶ್ಲೇಷಣೆ

(4ನೇ ಪುಟದಿಂದ)

ಮಾಡುತ್ತಾ ಕಾಂಗ್ರೆಸ್ (ಐ) ಪಕ್ಷವು ಹರಿಜನರನ್ನು ಕಾಂಗ್ರೆಸ್(ಐ)ಯ ಹತ್ತಿರದವರು ಎಂದು ತೋರಿಸುತ್ತಾ, ಇತರ ವಿಭಾಗಗಳ ದುಡಿಯುವ ಜನಸಮೂಹಗಳಲ್ಲಿ ಹರಿಜನರ ವಿರುದ್ಧ ಸಿಟ್ಟು ಉಂಟಾಗುವಂತೆ ಮಾಡುತ್ತಿದೆ. ಅವರನ್ನು ಹರಿಜನರ ವಿರುದ್ಧ ಎದ್ದು ನಿಲ್ಲುವಂತೆ ಮಾಡುತ್ತಿದೆ.

ಬಂಡವಾಳಶಾಹಿ ಭೂಮಾಲಕ ಸರಕಾರದಿಂದ ಮೀಸಲಾತಿಯ ಮೂಲಕ ಹರಿಜನರವಿಮೋಚನೆಯನ್ನು ಸಾಧಿಸುವುದು ಅಸಾಧ್ಯ. ಬಂಡವಾಳಶಾಹಿ ಭೂಮಾಲಕ ವರ್ಗಗಳ ವಿರುದ್ಧ, ಅವುಗಳನ್ನು ಪ್ರತಿನಿಧಿಸುವ ಕಾಂಗ್ರೆಸ್ (ಐ) ಪಕ್ಷದ ವಿರುದ್ಧದ ಸಾಮಾನ್ಯ ಹೋರಾಟದಲ್ಲಿ ಇತರ ದುಡಿಯುವ ಜನ ವಿಭಾಗಗಳ ಜತೆಯಲ್ಲಿ ಸೇರದೆ ಹೊರತು, ಪ್ರತ್ಯೇಕವಾಗಿ ಸಾಧಿಸಲು ಸಾಧ್ಯವಿಲ್ಲ. ಈ ವಸ್ತುಸ್ಥಿತಿಯನ್ನು ಹರಿಜನ ಮುಂದಾಳುಗಳು ಪರಿಗಣನೆಗೆ ತೆಗೆದುಕೊಳ್ಳಬೇಕು.

ಮೀಸಲಾತಿ ಮತ್ತು ವಿದ್ಯಾಭ್ಯಾಸದಲ್ಲಿ ಅಲ್ಪಸ್ವಲ್ಪ ಮುನ್ನಡೆ ಸಾಧಿಸಿದ ಒಂದು ಸಣ್ಣ ಹರಿಜನರ ವಿಭಾಗವು ಆಳುವ ಪಕ್ಷವನ್ನು ಎಲ್ಲಾ ಹರಿಜನರು ಬೆಂಬಲಿಸುವಂತೆ ಮಾಡುವ ಹಿತಾಸಕ್ತಿವುಳ್ಳದ್ದಾಗಿದೆ. ಆ ಮೂಲಕ ಅವರು ಈಗಿರುವ ಸಾಮಾಜಿಕ ಪದ್ಧತಿಗೆ ಬೆಂಬಲ ಕೊಡುವಂತಾಗಿದೆ. ಅವರು, ಇನ್ನೂ ಅಲ್ಪಸ್ವಲ್ಪ ಸವಲತ್ತುಗಳನ್ನು ಪಡೆಯುವುದಕ್ಕಾಗಿ, ಸಾಮಾಜಿಕ ಪದ್ಧತಿಯನ್ನೇ ಬದಲಾಯಿಸುವ ಸಾಮಾನ್ಯ ಹೋರಾಟದಲ್ಲಿ ಹರಿಜನರ ಸಮೂಹಗಳು ಪಾಲ್ಗೊಳ್ಳುವಂತೆ ಮಾಡಲು ತಮ್ಮ ಪ್ರಭಾವವನ್ನು ಬೀರುತ್ತಿದ್ದಾರೆ.

ಕಾರ್ಮಿಕ ವರ್ಗದ ಮುಷ್ಕರಗಳನ್ನಾಗಲೀ ಬೆಲೆಯೇರಿಕೆಯ ವಿರುದ್ಧದ ಹೋರಾಟಗಳನ್ನಾಗಲೀ ರೈತರ ಮತ್ತು ಕೃಷಿಕೂಲಿಗಾರರ ಚಳವಳಿಗಳನ್ನಾಗಲೀ, ತುರ್ತುಪರಿಸ್ಥಿತಿಯ ವಿರುದ್ಧದ ಹೋರಾಟವನ್ನಾಗಲೀ, ಅಥವಾ ಸಮಾಜವಾದಕ್ಕಾಗಿ ನಡೆಯುವ ವರ್ಗ ಚಳುವಳಿಯನ್ನಾಗಲೀ, ಯಾರ ವಿಮೋಚನೆಯು ಈ ಚಳವಳಿಗಳು ಯಶಸ್ವಿಯಾಗುವುದರಲ್ಲಿ ಅಡಕವಾಗಿದೆಯೋ, ಅಂತಹ ಹರಿಜನಸಮೂಹಗಳು ಈ ಈ ಚಳವಳಿಗಳಿಂದ ದೂರ ನಿಂತಿವೆ.

ಹರಿಜನ ಸಮೂಹಗಳು ಕಾಂಗ್ರೆಸ್ (ಐ) ಪಕ್ಷದ ಬಾಲವಾಗುವುದಕ್ಕೆ ಇದು ಕಾರಣವಾಗಿದೆ.

ಅಸ್ಪೃಶ್ಯತೆಯನ್ನೂ, ಹರಿಜನರ ಕಷ್ಟಕಾರ್ಪಣ್ಯಗಳನ್ನೂ ಮುಂದುವರಿಸುತ್ತಾ ಬರುವ ಭೂ–ಸಂಬಂಧಗಳನ್ನು ಕಾಂಗ್ರೆಸ್(ಐ) ರಕ್ಷಿಸುತ್ತಾ ಬರುತ್ತಿದೆ.

ಆದರೆ, ಅದೇ ವೇಳೆ ಮೀಸಲಾತಿಯನ್ನು ವಿರೋಧಿಸುವುದು ತಪ್ಪು. ಹರಿಜನರು ಮೀಸಲಾತಿಯಿಂದಲೂ ಪೂರ್ತಿ ಪ್ರಯೋಜನವನ್ನು ಪಡೆಯಲಿಲ್ಲವೆಂಬುದನ್ನು ನಾವು ಪರಿಗಣಿಸಬೇಕು. ಅಲ್ಲದೆ, ಹರಿಜನರ ಬಹುಭಾಗಗಳು ಮೀಸಲಾತಿಯಿಂದ ಬಾಧಿತರಾಗದೆ ಹೊರಗಡೆ ಉಳಿದಿವೆ ಎಂಬುದನ್ನು ನಾವು ಮರೆಯಬಾರದು.

ಮೀಸಲಾತಿ ಮತ್ತು ವಿಶೇಷ ಸವಲತ್ತುಗಳಿಂದ ಅಲ್ಪಸ್ವಲ್ಪ ಪ್ರಗತಿವುಂಟಾಗಿರುವುದಾದರೂ, ಬುದ್ಧಿಜೀವಿಗಳ ಹರಿಜನ ವಿಭಾಗವೊಂದನ್ನು ಸೃಷ್ಟಿಸಿರುವುದಾದರೂ, ಆಳುವ ವರ್ಗಗಳೂ, ಆಳುವ ಪಕ್ಷವೂ ಈ ವಿಧಾನವನ್ನು ಉಪಯೋಗಿಸಿಕೊಂಡು "ಈ ಅಸ್ಪೃಶ್ಯರು" ತಮ್ಮ ಬಾಲಬಡುಕರಾಗಿಯೇ ಇರುವಂತೆ ನೋಡಿಕೊಂಡಿದ್ದಾರೆ. ಈಗಿನ ಆಡಳಿತೆಯ ವಿರುದ್ಧದ ಸಾಮಾನ್ಯ ಹೋರಾಟದಲ್ಲಿ ಅವರು ಸೇರಿಕೊಳ್ಳದಂತೆ ಅವರು ತಡೆಹಿಡಿದಿದ್ದಾರೆ.

ಇಷ್ಟರವರೆಗೆ ಆಳುವವರ್ಗಗಳಿಗೆ ಈ ದೀನದಲಿತ ದಬ್ಬಾಳಿಕೆಗೊಳಗಾದ ವಿಭಾಗಗಳನ್ನು ಪ್ರತ್ಯೇಕವಾಗಿ ತಮ್ಮ ಒಂದು ಬಲ ವಿಭಾಗವಾಗಿಟ್ಟುಕೊಳ್ಳಲು ಸಾಧ್ಯವಾಗಿದೆ. ಈ ಪ್ರತ್ಯೇಕತೆಯನ್ನು ಹೇಗೆ ಮುರಿಯುವುದು, ಈ ಜನವಿಭಾಗಗಳನ್ನು ಇತರ ದುಡಿಯುವ ಜನವಿಭಾಗಗಳ ವಿರುದ್ಧ ಎತ್ತಿಕಟ್ಟುವ ಆಳುವ ಪಕ್ಷದ ಪ್ರಯತ್ನಗಳನ್ನು ಹೇಗೆ ವಿಫಲಗೊಳಿಸುವುದು ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

ಸಾಮೂಹಿಕ ಸಂಘಟನೆಗಳ ದೃಷ್ಟಿಕೋನದಲ್ಲಿರುವ ಬಲಹೀನತೆಗಳನ್ನು ತೆಗೆಯದೆ ಹೊರತು, ಮತ್ತು ಹರಿಜನ ಸಮೂಹಗಳಿಗೆ ಈ ಮೀಸಲಾತಿಯ ನಿಜವಾದ ಸತ್ಯವನ್ನು ಹೇಳಲು ಸಾಧ್ಯವಾಗುವತನಕ ಏಕಕಾಲದಲ್ಲಿ ಜಾತಿಪದ್ಧತಿಯ ವಿರುದ್ಧ ಮತ್ತು ಅಸ್ಪೃಶ್ಯತೆಯ ವಿರುದ್ಧ ಸೈದ್ಧಾಂತಿಕ ಪ್ರಚಾರ ಮಾಡುವ ತನಕ ಆಳುವ ಪಕ್ಷ ಮತ್ತು ಇತರ ಬಂಡವಾಳಶಾಹಿ ಪಕ್ಷಗಳು ವಿಭಜನೆಗಳನ್ನು ತೀವ್ರಗೊಳಿಸುವುದಂತೂ ಖಂಡಿತ. ಸರ್ವಾಧಿಕಾರಿ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಹರಿಜನ ವಿಭಾಗಗಳ ಈ ಹಿಂದುಳಿಯುವಿಕೆಯು ಚಳುವಳಿಯ ಮುನ್ನಡೆಯನ್ನು ತಡೆಹಿಡಿಯುವ ದೊಡ್ಡ ಆತಂಕವಾಗಿದೆ.

(ರಾಜಕೀಯ ಬೆಳವಣಿಗೆಗಳ ಕುರಿತಾದ ಕೇಂದ್ರಸಮಿತಿಯ ವರದಿಯಿಂದ ಆಯ್ದುಕೊಳ್ಳಲಾಗಿದೆ.)

●

ಜಿಲ್ಲಾ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ಅಧಿವೇಶನದ ಪೂರ್ವಭಾವಿಯಾಗಿ 30-10-81ರಂದು ಹಳಿಯಾಳದಲ್ಲಿ ಪಕ್ಷದ ಉತ್ತರಕನ್ನಡ ಜಿಲ್ಲಾ ಸಮ್ಮೇಳನ ನಡೆಯಿತು. ಸಭೆಗೆ ವಿಶೇಷ ಆಹ್ವಾನಿತರಾಗಿ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ಪಿ. ರಾಮಚಂದ್ರರಾವ್ ಮತ್ತು ಕಾಂ. ವಿ.ಜೆ.ಕೆ. ನಾಯರ್ ಆಗಮಿಸಿದ್ದರು.

ಕಾರ್ಯದರ್ಶಿ ಕಾಂ. ಮಂಜುನಾಥ ಪುಲಕರ ಇವರು ವರದಿ ಸಲ್ಲಿಸಿದರು. ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಕಾಂ. ಧಾರೇಶ್ವರ, ಉಮೇಶ್ ನಾಯ್ಕ ಮೊದಲಾದವರು ಪಾಲ್ಗೊಂಡಿದ್ದರು. ಕಾಂ. ಪಿ. ರಾಮಚಂದ್ರರಾವ್ ಮತ್ತು ಕಾಂ. ವಿ.ಜೆ.ಕೆ. ನಾಯರ್ ಮಾರ್ಗದರ್ಶನ ನೀಡಿದರು. ನಂತರ ವರದಿ ಸರ್ವಾನುಮತದಿಂದ ಅಂಗೀಕಾರವಾಯಿತು.

ಕೊನೆಯಲ್ಲಿ ರೀಜನಲ್ ಕಮಿಟಿಗೆ ಕಾಂ. ಎಂ. ಎಸ್. ಧಾರೇಶ್ವರ, ಉಮೇಶ್ ನಾಯ್ಕ, ಮುರಹರಿ ಕಾರವಾರಕರ, ಮೋಹನ್ ಪಾರೀಸ್‌ವಾಡ, ಟಿ. ಎಸ್. ನಾಯ್ಕ, ಮಂಜುನಾಥ ಪುಲಕರ, ಉಡಚಪ್ಪಾ ಬೊಬಾಟಿ, ಅಪ್ಪಣ್ಣ ಮತ್ತು ಹರೀಶ್ ನಾಯ್ಕ ಇವರುಗಳನ್ನು ಆಯ್ಕೆ ಮಾಡಲಾಯಿತು.

ರೀಜನಲ್ ಕಮಿಟಿಗೆ ಕಾರ್ಯದರ್ಶಿಯಾಗಿ ಕಾಂ. ಮಂಜುನಾಥ ಪುಲಕರರನ್ನು ಪುನರಾಯ್ಕೆ ಮಾಡಲಾಯಿತು.

ಸಮ್ಮೇಳನವು ದಾಂಡೇಲಿಯಲ್ಲಿ ಇತ್ತೀಚೆಗೆ ನಡೆದ ಪೋಲೀಸ್ ದಬ್ಬಾಳಿಕೆಯನ್ನು ತೀವ್ರವಾಗಿ ಖಂಡಿಸಿ ನ್ಯಾಯಾಂಗ ತನಿಖೆ ಮಾಡುವಂತೆ ಒತ್ತಾಯಿಸುವ ತೀರ್ಮಾನ ಕೈಗೊಂಡಿತು.

○

ವಾರ್ಷಿಕೋತ್ಸವ

3-11-81 ರಂದು ಮೈಸೂರಿನಲ್ಲಿ ಯುವಜನ ಫೆಡರೇಷನ್ (DYFI)ನ ಮೈಸೂರು ಘಟಕದ ಮೊದಲ ವಾರ್ಷಿಕೋತ್ಸವ ಆಚರಿಸಲಾಯಿತು. DYFI ಮೈಸೂರು ಘಟಕದ ಪ್ರಧಾನಕಾರ್ಯದರ್ಶಿ ಜಯರಾವ್ ಮತ್ತು ಮೋಹನ್‌ಕುಮಾರ್ ಮಾತನಾಡಿ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಲು ಕರೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಎಲ್. ಜಗನ್ನಾಥ ವಹಿಸಿದ್ದರು.

○

ರೈತ ಸಂಘದ ಸಮ್ಮೇಳನ

ಬೆಂಗಳೂರು ಜಿಲ್ಲಾ ರೈತಸಂಘದ ನಾಲ್ಕನೇ ಸಮ್ಮೇಳನವು ಹೊಸಕೋಟೆ ತಾಲೂಕಿನ ಸಮೇತನಹಳ್ಳಿಯಲ್ಲಿ ನವೆಂಬರ್ 7 ಮತ್ತು 8 ರಂದು ನಡೆಯಿತು. 7 ರಂದು ಮಧ್ಯಾಹ್ನ 2 ಘಂಟೆಗೆ ಪ್ರತಿನಿಧಿ ಸಮ್ಮೇಳನವು ಪ್ರಾರಂಭವಾಯಿತು. ಸ್ವಾಗತಸಮಿತಿಯ ಕಾರ್ಯದರ್ಶಿ ಕಾಂ. ಆರ್. ಮನೋಹರರವರು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಕಾಂ. ಸಿ. ರಾಮಭದ್ರಯ್ಯನವರು ವಹಿಸಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿದ ಕರ್ನಾಟಕ ಪ್ರಾಂತರೈತಸಂಘದ ಅಧ್ಯಕ್ಷರಾದ ಕಾಂ. ಮುಂಗುವಾಳಪ್ಪನವರು ರಾಜ್ಯದಲ್ಲಿ ನಡೆದ ರೈತರ ಹೋರಾಟಗಳ ಕುರಿತು ವಿವರಿಸಿದರು. ರೈತ ಹೋರಾಟಗಳನ್ನು ಪೋಲೀಸ್ ಬಲದ ಮೂಲಕ ಸದೆಬಡೆಯುತ್ತಿರುವ ಸರಕಾರದ ಧೋರಣೆಯನ್ನು ಕಟುವಾಗಿ ಟೀಕಿಸಿದ ಕಾಂ. ಮುಂಗುವಾಳಪ್ಪನವರು ರೈತಸಂಘಟನೆಯನ್ನು ಬಲಪಡಿಸುವ ಅಗತ್ಯವನ್ನು ಒತ್ತಿಹೇಳಿದರು.

ಜಿಲ್ಲೆಯ 4ನೇ ರೈತಸಮ್ಮೇಳನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಹಕಾರ್ಯದರ್ಶಿ ಕಾಂ. ಪಿ. ಕೆ. ಸುಬ್ರಮಣಿ, S F I ನ ಕಾಂ. ಮೋಹನ್, ಡಿ.ವೈ.ಎಫ್.ಐ.ನ ಕಾಂ. ಶಿವರಾಮ್, ಕೋಲಾರ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿ, D.W.Aನ ಕಾಂ. ಭಾರತಿ, ಸಿ. ಐ. ಟಿ. ಯು.ನ ಕಾಂ. ವಿನ್ಸೆಂಟ್, ಜಿಲ್ಲಾ ರೈತಸಂಘದ (ಸಿ.ಪಿ.ಐ. ನೇತೃತ್ವದ) ಕಾರ್ಯದರ್ಶಿ ಕಾಂ. ಜಿ. ಎಂ. ವೆಂಕಟೇಶ್ ಮತ್ತು ಸಿ.ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರುಗಳು ಶುಭಕೋರಿದರು.

ದಿನಾಂಕ 8 ರಂದು ಜಿಲ್ಲಾ ಕಾರ್ಯದರ್ಶಿ ಕಾಂ. ಪಿ. ಜಗನ್ನಾಥರು ಸಭೆಗೆ ವರದಿ ಒಪ್ಪಿಸಿದರು. ವರದಿ ಮೇಲೆ ನಡೆದ ಚರ್ಚೆಯಲ್ಲಿ 20 ಜನ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ನಂತರ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಂತರ ಪ್ರಾಂತರೈತಸಂಘದ ಪ್ರಧಾನಕಾರ್ಯದರ್ಶಿ ಕಾಂ. ಪಿ. ರಾಮಚಂದ್ರ ರಾವ್ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುತ್ತಾ, "ದೇಶದ ರೈತರು, ಕಾರ್ಮಿಕರು, ಯುವಕರು, ವಿದ್ಯಾರ್ಥಿಗಳು ಮತ್ತಿತರ ವಿಭಾಗದ ಜನತೆ ಒಂದಾಗಿ ತಮ್ಮನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸಬೇಕೆಂದು ತಿಳಿಸಿ ಜಿಲ್ಲೆಯ ರೈತರನ್ನು ಸಂಘಟಿಸುವ ಕೆಲಸವನ್ನು ತೀವ್ರಗೊಳಿಸಬೇಕೆಂದು ಕರೆನೀಡಿದರು.

ನಂತರ ಬೆಂಗಳೂರು ಜಿಲ್ಲಾ ಸಮಿತಿಗೆ ಈ ಕೆಳಕಂಡ ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು.

ಅಧ್ಯಕ್ಷರಾಗಿ ಕಾಂ. ಸಿ. ರಾಮಭದ್ರಯ್ಯ, ಬಿ. ಕೆ. ರಾಮಯ್ಯ, ಕಾಂ. ಶಾಮಣ್ಣರೆಡ್ಡಿ ಮತ್ತು ಕಾಂ. ಜಿ.ಸಿ ಗಂಗಯ್ಯ ಇವರುಗಳು ಉಪಾಧ್ಯಕ್ಷರಾಗಿ, ಪ್ರಧಾನಕಾರ್ಯದರ್ಶಿಯಾಗಿ ಕಾಂ. ಲಕ್ಕಣ್ಣ, ಕಾಂ. ಆರ್. ಮನೋಹರ, ಎಲ್. ಸಿ. ವಸಂತಯ್ಯ ಮತ್ತು ವೆಂಕಟರಾಮು ಇವರುಗಳು ಸಹಕಾರ್ಯದರ್ಶಿಗಳಾಗಿ ಇವರನ್ನೊಳಗೊಂಡ 26 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ದಿನಾಂಕ 7 ರಂದು ಸಾಯಂಕಾಲ ಬಹಿರಂಗ ಸಭೆ ನಡೆಯಿತು. ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು, ಸುತ್ತಮುತ್ತಲಿನ ಕಾರ್ಖಾನೆಗಳ ಕಾರ್ಮಿಕರು ಆಗಮಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ. ಸೂರ್ಯನಾರಾಯಣ ರಾವ್, ಪಿ. ರಾಮಚಂದ್ರರಾವ್, ಜಗನ್ನಾಥ, ಲಕ್ಷ್ಮಣರೆಡ್ಡಿ ಮತ್ತು ಕಾಂ. ವೆಂಕಟೇಶಗೌಡ ಮತ್ತಿತರರು ಮಾತನಾಡಿದರು.

ಸಮ್ಮೇಳನ ನಡೆಯುತ್ತಿರುವಾಗ ಬೆಂಗಳೂರಿನಲ್ಲಿ ಹಠಾತ್ತನೇ ಹೃದಯಾಘಾತದಿಂದ ಕಾಂ. ರಾಜು ನಿಧನರಾದ ಸುದ್ದಿ ತಲುಪಿತು. ಕಾಂ. ರಾಜು ಅವರ ನಿಧನಕ್ಕೆ ಸಂತಾಪಸೂಚಿಸಿ ಮೌನವನ್ನಾಚರಿಸಲಾಯಿತು.

○

ಗೋಕಾಕ್ ಸಮಿತಿಯ ವರದಿಯ ತುರ್ತು ಜಾರಿಗೆ ಎಸ್.ಎಫ್.ಐ. ಒತ್ತಾಯ

ಕರ್ನಾಟಕದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಕನ್ನಡ ಪ್ರಥಮ ಭಾಷೆಯ ಸ್ಥಾನವನ್ನು ಪಡೆಯತಕ್ಕದ್ದು ಎಂದು ಸರಿಯಾದ ಶಿಫಾರಸ್ಸು ಮಾಡಿರುವ ಗೋಕಾಕ್ ಸಮಿತಿಯ ವರದಿಯನ್ನು ಕೂಡಲೇ ಜಾರಿಗೆ ತರಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಒತ್ತಾಯಪಡಿಸುತ್ತದೆ. ಮಠಾಧಿಪತಿಗಳ ಮತ್ತು ಪುರೋಹಿತಶಾಹಿಗಳ ಒತ್ತಾಯಕ್ಕೆ ಮಣಿದು ಜನಬಳಕೆಯಲ್ಲಿಲ್ಲದ ನಿರುಪಯೋಗಿ ಭಾಷೆಯಾದ ಸಂಸ್ಕೃತಕ್ಕೆ ಪ್ರಥಮ ಭಾಷೆಯ ಸ್ಥಾನ ನೀಡುವ ಕುಟಿಲ ತಾರಸ್ಥಾನ ನಡೆಸುತ್ತಿರುವ ಗುಂಡೂರಾವ್ ಸರಕಾರದ ಕ್ರಮವನ್ನು ಎಸ್. ಎಫ್. ಐ. ತೀವ್ರವಾಗಿ ಖಂಡಿಸಿದೆ.

ಕನ್ನಡನಾಡಿನಲ್ಲಿ ಕನ್ನಡಕ್ಕಾಗಿ ಹೋರಾಡಬೇಕಾದ ಸ್ಥಿತಿ ಬಂದಿರುವುದು ನಾಚಿಗೆಗೇಡಿನ ವಿಚಾರ. ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಆಡಳಿತದಲ್ಲಿ, ಕನ್ನಡವನ್ನು ಯಶಸ್ವಿಯಾಗಿ ಅಳವಡಿಸಲು ಸೋತಿರುವ ಸಂದರ್ಭದಲ್ಲಿ ಅಬ್ಬರದಿಂದ ಆಚರಿಸಲಾದ ಕನ್ನಡ ರಾಜ್ಯೋತ್ಸವದ ಬೆಳ್ಳಿಹಬ್ಬವು ಅರ್ಥಹೀನವಾದದ್ದು. ರಾಜ್ಯದಲ್ಲಿ ಶೇಕಡ 65ರಷ್ಟು ಜನ ಅವಿದ್ಯಾವಂತರಿದ್ದಾಗ್ಯೂ ಕನ್ನಡ ಶಾಲೆಗಳು ಮುಚ್ಚಲ್ಪಡುತ್ತಿದೆ. ಕನ್ನಡ ಪದವೀದರರು, ಸ್ನಾತಕೋತ್ತರ ಪದವೀದರರಿಗೇ ಉದ್ಯೋಗ ಅವಕಾಶ ಇಲ್ಲವಾಗಿದೆ. ಕನ್ನಡ ಬೆರಳಚ್ಚುಗಾರರು ಅಪಾರ ಸಂಖ್ಯೆಯಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಈ ಎಲ್ಲಾ ಗಂಭೀರ ಸಮಸ್ಯೆಗಳನ್ನು ಪರಿಹರಿಸದೆ, ಜೀವಂತ ಭಾಷೆಗೆ ಬೆಲೆಕೊಡದೆ, ಸತ್ತ ಭಾಷೆಯೊಂದಕ್ಕೆ ಜೀವಕೊಡಲು ಅಪಾರ ಹಣ ವ್ಯಯ ಮಾಡುವ ಸರಕಾರದ ಕ್ರಮವನ್ನು ಎಸ್. ಎಫ್. ಐ. ಖಂಡಿಸಿದೆ.

ಕನ್ನಡಕ್ಕೆ ಪ್ರಥಮ ಭಾಷೆಯ ಸ್ಥಾನವನ್ನು ನೀಡುವ ನಿಟ್ಟಿನಲ್ಲಿ ಗೋಕಾಕ್ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರದಿದ್ದಲ್ಲಿ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳ ಜೊತೆ ಸೇರಿ ಮೈಸೂರಿನಲ್ಲಿ ರಾಜ್ಯ ಸರಕಾರವು ನಡೆಸಲಿರುವ ವಿಶ್ವ ಕನ್ನಡ ಸಮ್ಮೇಳನವನ್ನು ಎಸ್. ಎಫ್. ಐ. ಧಿಕ್ಕರಿಸುತ್ತದೆ. ಜನರ ತಾಳ್ಮೆಯೊಂದಿಗೆ ಆಟವಾಡುತ್ತಿರುವ ಗುಂಡೂರಾವ್ ಸರಕಾರದ ಕುಟಿಲ ನೀತಿಯ ವಿರುದ್ಧ ವಿದ್ಯಾರ್ಥಿಗಳು ರಾಜ್ಯದಾದ್ಯಂತ ಹೋರಾಟ ನಡೆಸಲು ಎಸ್. ಎಫ್. ಐ. ರಾಜ್ಯಸಮಿತಿಯ ಪರವಾಗಿ ಕಾಂ. ಜಯಕುಮಾರ್ ಕರೆ ನೀಡಿದ್ದಾರೆ.

●

ಪ್ರತಿಭಟನಾ ದಿನ

ಬೆಲೆ ಏರಿಕೆ, ಸರಕಾರದ ಕಾರ್ಮಿಕ ವಿರೋಧಿ, ಜನವಿರೋಧಿ ಕಾನೂನುಗಳ ವಿರುದ್ಧ ರಾಷ್ಟ್ರೀಯ ಆಂದೋಲನ ಸಮಿತಿಯ ರಾಜ್ಯಘಟಕದ ತೀರ್ಮಾನದಂತೆ ನವೆಂಬರ 3 ರಂದು ರಾಜ್ಯದಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಲು ತೀರ್ಮಾನಿಸಿತ್ತು. ಅನಿವಾರ್ಯ ಕಾರಣಗಳಿಂದ ಸಾರ್ವತ್ರಿಕ ಮುಷ್ಕರವನ್ನು ಮುಂದೂಡಿ ನವೆಂಬರ 3 ರಂದು ಪ್ರತಿಭಟನಾ ದಿನ ಆಚರಿಸಬೇಕೆಂದು ಕೇಳಿಕೊಳ್ಳಲಾಗಿತ್ತು.

ರಾಜ್ಯದ ಬೇರೆ ಬೇರೆ ಕಡೆ ಪ್ರತಿಭಟನಾ ಪ್ರದರ್ಶನ ನಡೆದಿರುವ ವರದಿಯಾಗಿದೆ.

ದಿನಾಂಕ 3 ರಂದು ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ನಲ್ಲಿ ಎನ್.ಸಿ.ಸಿ.ಯು ಆಶ್ರಯದಲ್ಲಿ ಬಹಿರಂಗ ಪ್ರತಿಭಟನಾ ಸಭೆ ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಕಾಂ. ಟಿ.ಎಸ್. ಅನಂತರಾಮ, ಎಂ. ಎಸ್. ಕೃಷ್ಣನ್, ರಾಜಗೋಪಾಲ್ ಮೊದಲಾದವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಅನಂತಸುಬ್ಬರಾವ್ ವಹಿಸಿದ್ದರು.

ನವೆಂಬರ್ 23ರಂದು ದೆಹಲಿಯಲ್ಲಿ ಪಾರ್ಲಿಮೆಂಟಿನೆದುರು ನಡೆಯಲಿರುವ ಪ್ರತಿಭಟನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕಾರ್ಮಿಕರನ್ನು ವಿನಂತಿಸಲಾಯಿತು. ●

ರಾಷ್ಟ್ರೀಯ ಆಂದೋಲನ ಸಮಿತಿಯ ಜಿಲ್ಲಾ ಸಮಾವೇಶ

25-10-81 ರಂದು ಎನ್.ಸಿ.ಸಿ. ರಾಜ್ಯಘಟಕದ ಆದೇಶದ ಮೇರೆಗೆ ಮೈಸೂರಿನಲ್ಲಿ ಜಿಲ್ಲಾ ಸಮಾವೇಶವನ್ನು ನಡೆಸಲಾಯಿತು. ಸುಮಾರು 250 ಪ್ರತಿನಿಧಿಗಳು ಭಾಗವಹಿಸಿದ್ದರು. ಸಿ. ಐ. ಟಿ. ಯು. ವಿನ ಕಾಂ. ಎಂ. ಎನ್. ಉಗ್ರಪ್ಪ, ಬಿ. ಎಂ. ಎಸ್.ನ ವಿಶ್ವನಾಥರಾವ್ ಮತ್ತು ಎ. ಐ. ಟಿ. ಯು. ಸಿ. ಯ ಕಾಂ. ಸೋಮಸುಂದರ ಶರ್ಮ ಇವರುಗಳು ಅಧ್ಯಕ್ಷಮಂಡಳಿಯಲ್ಲಿದ್ದರು.

ಬೆಲೆಏರಿಕೆಯ ವಿರುದ್ಧ ಮತ್ತು ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಸರಕಾರದ ಧೋರಣೆಯನ್ನು ಖಂಡಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

○

ಶಿರಾದಲ್ಲಿ ಜಿಲ್ಲಾ ಸಮಾವೇಶ

26-10-81 ರಂದು ತುಮಕೂರು ಜಿಲ್ಲೆಯ ಶಿರಾದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಘಟಕವು ಕಾಂ. ಮಹಮ್ಮದ್ ದಸ್ತಗೀರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಪಕ್ಷದ ತುಮಕೂರು ಜಿಲ್ಲಾ ಸಮ್ಮೇಳನವನ್ನು ಶಿರಾದಲ್ಲಿ ನಡೆಸುವ ತೀರ್ಮಾನವನ್ನು ಸಭೆ ಸ್ವಾಗತಿಸಿತು. ಕಾಂ. ಹಬೀಬ್‌ರ ನೇತೃತ್ವದಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು.

ಸಭೆಯಲ್ಲಿ ಕಾಂ. ಎಚ್. ಸಿ. ಚನ್ನಪ್ಪನವರು ಉಪಸ್ಥಿತರಿದ್ದರು.

ಶಿರಾ ಬೀಡಿ ಕೆಲಸಗಾರರ ಸಂಘದ ಖಜಾಂಚಿಯಾದ ಕಾಂ. ಮಹಮ್ಮದ್ ಖಾಸಿಂ ಅವರು ತಮ್ಮ ಪುತ್ರ ಮಹಮ್ಮದ್ ಮುನೀರ್ ಅವರ ಮದುವೆಯ ಸಂದರ್ಭದಲ್ಲಿ ಸಮ್ಮೇಳನಕ್ಕೆ 25 ರೂ. ಕಾಣಿಕೆ ಕೊಟ್ಟಿರುವುದನ್ನು ಕಾಂ. ಎಚ್. ಸಿ ಚನ್ನಪ್ಪ ಸ್ವಾಗತಿಸಿ ವಧೂವರರಿಗೆ ಶುಭಕೋರಿದ್ದಾರೆ.

○

ಬಿನ್ನಿಮಿಲ್ಲನ್ನು ಸರಕಾರವೇ ವಹಿಸಿಕೊಳ್ಳಲು ಒತ್ತಾಯ

ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಕಮಿಟಿಯ ಆಶ್ರಯದಲ್ಲಿ 9-11-81ರಂದು ಬೆಂಗಳೂರಿನ ಸಿರಸಿ ಸರ್ಕಲ್‌ನಲ್ಲಿ ಬೃಹತ್ ಬಹಿರಂಗ ಸಭೆ ನಡೆದು ಮುಳುಗುತ್ತಿರುವ ಬಿನ್ನಿಮಿಲ್ಲನ್ನು ಸರಕಾರವೇ ವಹಿಸಿಕೊಳ್ಳುವಂತೆ ಒತ್ತಾಯಿಸಲಾಯಿತು. ಬಹಿರಂಗ ಸಭೆಯಲ್ಲಿ ಸುಮಾರು 4000 ಕಾರ್ಮಿಕರು ಪಾಲ್ಗೊಂಡಿದ್ದರು.

ಜಿಲ್ಲಾ ಸಿ. ಐ. ಟಿ. ಯು. ಸಮಿತಿಯ ಉಪಾಧ್ಯಕ್ಷ ಕಾಂ. ಪಿ. ಕೆ. ಸುಬ್ರಮಣಿಯವರು ಆರಂಭದಲ್ಲಿ ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಸಿ. ಐ. ಟಿ. ಯು. ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್, ವಿಜೆಕೆ ನಾಯರ್, ಟಿ. ಎಸ್. ಅನಂತರಾಮ್ ಮತ್ತು ಬಿನ್ನಿಮಿಲ್ ಸ್ಟಾಫ್ ಅಸೋಸಿಯೇಷನ್ ಅಧ್ಯಕ್ಷ ಕಾಂ. ಕೆ. ಎಸ್. ಸುಬ್ರಮಣ್ಯಂ ಇವರುಗಳು ಮಾತನಾಡಿ ಸರಕಾರ ಕೂಡಲೇ ಬಿನ್ನಿಮಿಲ್ಲನ್ನು ವಶಪಡಿಸಿಕೊಂಡು ಬೀದಿಪಾಲಾಗುತ್ತಿರುವ 7000 ಕಾರ್ಮಿಕರನ್ನು ಅವರ ಕುಟುಂಬದವರನ್ನು ಉಳಿಸಬೇಕೆಂದು ಒತ್ತಾಯಿಸಿದರು.

ಸರಕಾರ ವಿಫಲವಾದಲ್ಲಿ ಜಂಟೀ ಹೋರಾಟಕ್ಕೆ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು (ಇಂಟಕ್ ಸೇರಿ) ಮುಂದೆಬರಬೇಕೆಂದು ಮನವಿ ಮಾಡಿದರು.

ಪ್ರತಿಭಟನಾ ದಿನಾಚರಣೆ

ರಾಷ್ಟ್ರೀಯ ಆಂದೋಲನ ಸಮಿತಿಯು ಕೊಟ್ಟ ಕರೆಯ ಅನುಗುಣವಾಗಿ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ 3-11-81 ರಂದು ಪ್ರತಿಭಟನಾ ದಿನವನ್ನು ಆಚರಿಸಲಾಯಿತು.

ಸಕಲೇಶಪುರದ ಪ್ರಮುಖ ಬೀದಿಗಳಲ್ಲಿ ವಿವಿಧ ತೋಟಗಳಿಂದ ಬಂದ ನೂರಾರು ಕಾರ್ಮಿಕರು ಕೆಂಬಾವುಟಗಳನ್ನು ಹಿಡಿದು ಮೆರವಣಿಗೆ ಹೊರಡಿಸಿದ್ದರು. ಮೆರವಣಿಗೆಯ ನೇತೃತ್ವವನ್ನು ಕಾಂ. ವಿ. ಸುಕುಮಾರ್, ಪಾಲ್ ಡಿಸೋಜ, ದೂಜ ಮತ್ತು ಕಾಂ. ತನಿಯ ವಹಿಸಿದ್ದರು. ಸಿ. ಐ. ಟಿ. ಯು. ಸಂಘಟನೆಗಳಿಗೆ ಸೇರಿದ ಕಾರ್ಮಿಕರು ಸಂಘದ ಕರೆಯಂತೆ ಸಂಪೂರ್ಣ ಮುಷ್ಕರ ನಡೆಸಿದರು.

ಸಕಲೇಶಪುರದ ಉಪವಿಭಾಗಾಧಿಕಾರಿಗಳ ಮುಖಾಂತರ ಮನವಿ ಪತ್ರವನ್ನು ಮುಖ್ಯಮಂತ್ರಿಗೆ ಕಳಿಸಿಕೊಡಲಾಯಿತು. ನಂತರ ತೋಟಕಾರ್ಮಿಕರ ಸಂಘದ ಕಚೇರಿ ಎದುರು ನಡೆದ ಸಭೆಯನ್ನುದ್ದೇಶಿಸಿ ಕಾಂ. ಸುಕುಮಾರ್ ಮಾತನಾಡಿದರು.

○

ಇಂದು (ನವೆಂಬರ್ 14) ಮಕ್ಕಳ ದಿನ

ಕಸದ ತೊಟ್ಟಿಯ ಮಕ್ಕಳು

ಭಾರತದ ಪ್ರಥಮ ಪ್ರಧಾನ ಮಂತ್ರಿ ಪಂಡಿತ್ ನೆಹರೂರ ಜನ್ಮದಿನವನ್ನು ಪ್ರತಿವರ್ಷ ಮಕ್ಕಳ ದಿನವನ್ನಾಗಿ ಆಚರಿಸಲಾಗುತ್ತಿದೆ. ಗರಿಗರಿ ಬಟ್ಟೆ ಹಾಕಿಕೊಂಡು ಉತ್ಸಾಹವೇ ಮೈವೆತ್ತುತಿರುವ ನೂರಾರು ಕಂದಮ್ಮಗಳು ಅಂದು ಹರ್ಷದಿಂದ ಒಂದೆಡೆ ಸೇರುವುದನ್ನು ನಾವು ನೋಡುತ್ತೇವೆ. ನೆಹರೂ ಬದುಕಿದ್ದಾಗ, ನೀಟಾಗಿ ಬಟ್ಟೆಹಾಕಿಕೊಂಡು ಕೆಂಗುಲಾಬಿ ಹಿಡಿದು ತಮಗೆ ಶುಭಾಶಯ ಸಲ್ಲಿಸಲು ಬರುತ್ತಿದ್ದ ಸಾಹೇಬರ ಮಕ್ಕಳೊಂದಿಗೆ (ನ. 14ರಂದು) ಮಾತನಾಡುತ್ತ ಗಂಟೆಗಟ್ಟಲೇ ಕಳೆಯುತ್ತಿದ್ದರು. ಚಾಚಾ ನೆಹರೂ ರೆಂದು ಖ್ಯಾತರಾಗಿದ್ದರು.

ಸ್ವಾತಂತ್ರ್ಯ ದೊರೆತಂದಿನಿಂದ ಇಲ್ಲಿಯುವರೆಗೆ ಕೊಳಚೆಯಲ್ಲಿ ಹುಟ್ಟಿ ಬೆಳೆಯುತ್ತಿರುವ ಮೊಗ್ಗುಗಳ ಏಳ್ಗೆಗೆ ಸರಕಾರ ಕಿಂಚಿತ್ತೂ ಶ್ರಮಿಸಿಲ್ಲ. ಪಂಡಿತ್ ನೆಹರೂ ನೇತೃತ್ವದ, ಅವರ ಮಗಳ ನೇತೃತ್ವದ ಸರಕಾರಗಳು ಇದಕ್ಕೆ ಹೊರತಲ್ಲ. ದೇಶದ ಭಾವೀ ಆಸ್ತಿಯಾದ ಬಹುಪಾಲು ಮಕ್ಕಳು ಕನಿಷ್ಠ ಸೌಲಭ್ಯಗಳಿಂದಲೂ ವಂಚಿತರಾಗಿ ಕ್ರಿಮಿಗಳಂತೆ ಬದುಕುತ್ತಿರುವ ನೋಟ ಎಲ್ಲೆಲ್ಲೂ ಕಂಡುಬರುವದು.

ಇತ್ತೀಚೆಗೆ ನಮ್ಮ ರಾಜ್ಯದ ರಾಜಧಾನಿ ಬೆಂಗಳೂರಿನ ಕಸದ ತೊಟ್ಟಿಗಳನ್ನೇ ತಮ್ಮ ಜೀವನಾಶ್ರಯ ಮಾಡಿಕೊಂಡು ಬದುಕುತ್ತಿರುವ ಕೆಲವು ಮಕ್ಕಳನ್ನು ನಾನು ಸಂದರ್ಶಿಸಿದ್ದೆ. ಈ ಮಕ್ಕಳೆಲ್ಲರ ಕತೆ ಹೆಚ್ಚೂ ಕಡಿಮೆ ಒಂದೇ ತೆರನಾದುದು. ಕಿತ್ತು ತಿನ್ನುವ ಹಸಿವಿನಿಂದ ಕಂಗೆಟ್ಟಿರುವ ಈ ಮೊಗ್ಗುಗಳು ಅರಳುವ ಮುನ್ನವೇ ಉದುರಿ ಹೋಗುತ್ತಿರುವುದು ನಮ್ಮ ದೇಶದ ಅತಿದೊಡ್ಡ ದುರಂತ.

ಇಗೋ! ನಾನು ಸಂದರ್ಶಿಸಿದ ಕೆಲವರನ್ನು ನೀವೂ ಭೇಟಿಯಾಗಿ: "ನನ್ನ ಹೆಸರು ಮುನಿಸ್ವಾಮಿ" ನನಗೆ 13 ವರ್ಷ ವಯಸ್ಸು. ನನ್ನ ತಂದೆತಾಯಿಗಳ್ಯಾರೋ ನನಗೆ ತಿಳಿಯದು. ನಾನು ಬೆಳಿಗ್ಗೆ ಎದ್ದೊಡನೆ ಅರ್ಧ ಕಾಫಿ ಕುಡಿದು ನನ್ನ ಕಾಯಕ ಶುರು ಮಾಡುವೆ. ನನ್ನೊಂದಿಗೆ ನಾಲ್ಕಾರು ನನ್ನ ಸ್ನೇಹಿತರಿದ್ದಾರೆ. ಒಂದೊಂದು ಗೋಣಿಚೀಲವನ್ನು ನಾವುಗಳೆಲ್ಲ ಅದೃಷ್ಟವನ್ನನುಸರಿಸುತ್ತ ಹೊರಡುತ್ತೇವೆ.

ತಗಡಿನ ಡಬ್ಬಿಗಳು, ಖಾಲಿಬಾಟಲಿಗಳು ಇತ್ಯಾದಿ...ಇತ್ಯಾದಿ ಬೇರೆಯವರು ನಿರುಪಯೋಗಿಯೆಂದು ಬೀಸಾಡಿದ ಪದಾರ್ಥಗಳನ್ನು ಹೆಕ್ಕುತ್ತೇವೆ. ಅಲ್ಪ ಬೆಲೆಗೆ ಮಾರಿ ಸಿಕ್ಕ ಪುಡಿಗಾಸುಗಳೇ ನಮಗೆ ಜೀವನಾಧಾರ. ಏನೂ ದೊರೆಯದಿರುವ ದಿನವೂ ಉಂಟು. ಆಗ ಜನ ಬೀಸಾಕಿದ ಅನ್ನವನ್ನು ಹೆಕ್ಕಿ ದಿನಗಳೆಯುತ್ತೇವೆ".

ನಾನು ಮುನಿಸ್ವಾಮಿಯನ್ನು ಕೇಳಿದೆ; ರಾತ್ರಿ ಹೇಗೆ ಕಳೆಯುತ್ತೀ ? "ಬಾಗಿಲು ಮುಚ್ಚಿದ ಅಂಗಡಿಗಳೆದುರು" ಎಂದುತ್ತರಿಸಿದ ಮುನಿಸ್ವಾಮಿ ತನ್ನ ಬಗಲಿನಲ್ಲಿ ಇಟ್ಟುಕೊಂಡಿದ್ದ ತನ್ನ ಹಾಸಿಗೆಯನ್ನು ನಮಗೆ (ನನ್ನೊಂದಿಗೆ ನನ್ನ ಸಂಗಾತಿಯೊಬ್ಬರಿದ್ದರು) ತೋರಿಸಿದ. ಅದೊಂದು ಜೀರ್ಣವಾಗಿದ್ದ ಹಳೆಯ ರಗ್ಗು. ಡಿಸೆಂಬರಿನ ಬೆಂಗಳೂರು ಚಳಿಯ ಅನುಭವವಿರುವ ನನ್ನೊಂದಿಗೆ ಇದ್ದ ಸಂಗಾತಿಯು ಮುನಿಸ್ವಾಮಿಯ ಮಾತುಕೇಳಿ ಕಂಗಾಲಾದರು.

ಇದೋ ಇನ್ನೊಬ್ಬ ಹುಡುಗನನ್ನು ಭೇಟಿಮಾಡಿ :



"ನನಗೆ 14 ವರ್ಷ. ನಮಗೊಂದು ಗುಡಿಸಲಿದೆ. ತಂದೆ ಯಾರೋ ನನಗೆ ತಿಳಿಯದು. ತಾಯಿ ಇದ್ದಾಳೆ. ನಾಲ್ಕು ಪುಟ್ಟ ತಮ್ಮಂದಿರಿದ್ದಾರೆ. (ಯಾರೊಡನೆಯೋ ಮಲಗಿ ತನ್ನನ್ನು ಹೊರತಂದಿರುವ ತಾಯಿಯ ಕುರಿತು ಕಾಸೀಂ ಆಕ್ರೋಶ ವ್ಯಕ್ತಪಡಿಸುತ್ತಾನೆ.) ಮನೆ ನನಗೊಂದು ನರಕ. ನಾನು ಅಲ್ಲಿಗೆ ಹೋಗುವುದೇ ಇಲ್ಲ. (ಮುನಿಸ್ವಾಮಿ, ರಂಗ, ಪ್ರಕಾಶ್, ರಾಜು ಈ ಮುಂತಾದ ನಾಲ್ಕಾರು ಜನರ ಗುಂಪಿನ ನಾಯಕರಾದ ಕಾಸೀಂ ತಮ್ಮ ಜಗತ್ತಿನ ಪರಿಚಯವನ್ನು ನಾಯಕನ ಠೀವಿ ಠೇಂಕಾರಗಳಿಂದಲೇ ಪರಿಚಯ ಮಾಡಿಕೊಟ್ಟನು.)

ಮುನಿಸ್ವಾಮಿ, ರಂಗ, ಪ್ರಕಾಶ್, ರಾಜು (ಈ ರಾಜು ಕನ್ನಡ ನಟ ರಾಜಕುಮಾರರ ಭಕ್ತ) ಈ ಮೊದಲಾದ ನಾಲ್ಕೈದು ಮಕ್ಕಳು ದಿನವಿಡೀ ಸಂಗ್ರಹಿಸಿದ ಅಮೂಲ್ಯ (?) ವಸ್ತುಗಳನ್ನು ಮಾರಾಟಮಾಡಿ ಬಂದ ದುಡ್ಡನ್ನು ವಿಕ್ರಯಿಸುವ ಹೊಣೆ ಗುಂಪಿನ ನಾಯಕ ಕಾಸೀಂನದ್ದು. ಕಾಸೀಂ ಕೆಲವೊಮ್ಮೆ ಸರಿಯಾಗಿ ದುಡ್ಡು ಕೊಡುವುದಿಲ್ಲವೆಂದು ರಾಜು ನಮ್ಮೊಡನೆ ಗುಟ್ಟಾಗಿ ತಿಳಿಸಿದ.

ಕಸದ ತೊಟ್ಟಿಗಳಲ್ಲಿ ಲಭ್ಯವಾಗುವ ಸಾಮಗ್ರಿಗಳನ್ನು ಪಡೆಯಲು, ತೊಟ್ಟಿಯ ಮೇಲಿನ ಸ್ವಾಮ್ಯಕ್ಕಾಗಿ ಬೇರೆ ಗುಂಪಿನ ಜೊತೆ ಘರ್ಷಣೆ ನಡೆದಿರುವುದೂ ಉಂಟೆಂದು ರಂಗ ತಿಳಿಸಿದ. ಈ ಗಲಾಟೆಯಲ್ಲಿ ಕೆಲವು ದಿನಗಳ ಹಿಂದೆ ತಾನೇ ತಾನು ಬ್ಲೇಡ್‌ನಿಂದ ಗಾಯಗೊಂಡಿದ್ದನ್ನು ರಂಗ ನಮಗೆ ತಿಳಿಸಿದ; ತನ್ನ ಗಾಯವನ್ನೂ ನಮಗೆ ತೋರಿಸಿದ. ಸೀಳು ಬಿಟ್ಟ ಸೌತೆಕಾಯಿಯಂತೆ ಬಾಯ್ಬಿಟ್ಟಿದ್ದ ರಂಗನಿಗಾದ ಗಾಯ ಇನ್ನೂ ಮಾಗಿರಲಿಲ್ಲ.

ನಮ್ಮೊಂದಿಗೆ ಹರಟೆಕೊಚ್ಚುತ್ತಿರುವ ತನ್ನ ಶಿಷ್ಯರನ್ನು ಕಾಸೀಂ ಹೊತ್ತಾಯಿತೆಂದು ಗದರಿ ಹೊರಡಿಸಿದ. ಎಣ್ಣೆ ಕಾಣದ ಕೆದರಿದ ತಲೆ, ಗುಳಿಬಿದ್ದ, ಯಾವ ಭಾವನೆಯನ್ನೂ ವ್ಯಕ್ತಪಡಿಸದ ಕಣ್ಣುಗಳು, ಮಾಂಸವಿಲ್ಲದ ತೆಳ್ಳನೆಯ ಕೈಕಾಲುಗಳು, ಕಿಂಚಿತ್ತೂ ರಕ್ತವಿಲ್ಲದ ಮುಖ...ಇವರೇ ನಮ್ಮ ಭವ್ಯಭಾರತದ ಭಾವೀ ಆಸ್ತಿಗಳು.

ಸೇದಿ ಬಿಸಾಕಿದ ಬೀಡಿ ತುಂಡುಗಳನ್ನು ಬಾಯಲ್ಲಿ ಕಚ್ಚಿಕೊಂಡು, ಗೋಣಿ ಚೀಲ ಹೆಗಲಿಗೇರಿಸಿ ನಡೆದ ಆ ತಂಡ ತನ್ನ ಮುಂದಿನ ಸಾಧನೆಗಾಗಿ ನಡೆಯಿತು. ನನಗೆ ಆ ಮಕ್ಕಳು ಚೂರು ಅನ್ನಕ್ಕಾಗಿ ದಿಗ್ವಿಜಯ ಹೊರಟ ದೃಷ್ಟಿ ನೋಡಿ ಇಕ್ಬಾಲ್‌ರ ಕವನ ನೆನಪಿಗೆ ಬಂದಿತು; (ಸಾರಾ ಜಹಾಸೇ ಅಚ್ಛಾ ಏ ಹಿಂದೂಸ್ತಾನ ಹಮಾರಾ..)

ನಾನು ಸಂದರ್ಶಿಸಿದ ಈ ಗುಂಪಿನ ಪ್ರಕಾರ ಸ್ವಲ್ಪ ಗಂಭೀರವಾದ ಹುಡುಗ. ಪ್ರಕಾಶ್ ದಿನವಿಡೀ ಸುತ್ತಾಡಿ ರಾತ್ರಿ ತನ್ನ ಹರಕು ಗೋಣಿ ಚೀಲದಲ್ಲಿ ದೇಹ ಸುತ್ತಿಕೊಂಡು ಕನಸು ಕಾಣುತ್ತಾನೆ. ಏನು ಕನಸು ಗೊತ್ತೆ? ಅಮಿತಾಬ್ ಬಚ್ಚನನ, ಧರ್ಮೇಂದ್ರನ, ಹಾಜೀಮಸ್ತಾನನ ಕನಸುಗಳನ್ನು. ಪ್ರಕಾಶ್ ನನ್ನನ್ನು ಕೇಳಿದ: "ಸರ್ ನೀವು ದೀವಾರ್ ನೋಡಿರುವಿರಾ? ನಾನೂ ಒಂದು ದಿನ ಅಮಿತಾಬ್ ಬಚ್ಚನ್ ಆಗುತ್ತೇನೆ." ಹೀಗೆಂದ ಪ್ರಕಾಶ್ ತನ್ನ ಸ್ಥಿತಿಗತಿಗಳ ಬಗ್ಗೆ ಚಿಂತಿತನಾದಂತಿತ್ತು.

ಈ ಮಕ್ಕಳೆಲ್ಲ ಸುತ್ತಲಿನ ಪ್ರಪಂಚ (ಸಿನೇಮಾಗಳ ವಿನಃ)ದ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡಿಲ್ಲ. ಆಸಕ್ತಿಯೂ ಇಲ್ಲ.

ಈ ಕೆಳಗಿನ ಒಂದೆರಡು ಅಂಕೆಸಂಖ್ಯೆ ಗಮನಿಸಿ :

1) ದೇಶದ ಜನಸಂಖ್ಯೆಯ ಶೇ. 42 ರಷ್ಟು ಮಕ್ಕಳಿದ್ದಾರೆ.

2) ಪುಷ್ಟಿಕರ ಆಹಾರವಿಲ್ಲದೇ ಪ್ರತಿ ತಿಂಗಳೂ ಸುಮಾರು 1 ಲಕ್ಷ ಮಕ್ಕಳು ಸಾವನ್ನಪ್ಪುತ್ತಿದ್ದಾರೆ.

3) ದೇಶದಲ್ಲಿ ಸುಮಾರು 60ಮಿಲಿಯ (ಒಂದು ಮಿಲಿಯ : 10 ಲಕ್ಷ) ಮಕ್ಕಳು ಹಸಿವಿನಿಂದ ಬಳಲುತ್ತಿದ್ದಾರೆ.

4) ಶೇ. 90ರಷ್ಟು ಮಕ್ಕಳಿಗೆ ಪುಷ್ಟಿಕರ ಆಹಾರವಿಲ್ಲ.

5) ಶೇ. 40ರಷ್ಟು ಮಕ್ಕಳು 6ನೇ ವಯಸ್ಸಿನಲ್ಲೇ ಸಾವನ್ನಪ್ಪಿದ್ದಾರೆ.

6) "ಎ" ಖನಿಜಾಂಶ (ವಿಟಮಿನ್) ವಿಲ್ಲದ ಕಾರಣ ದೇಶದಲ್ಲಿ ಪ್ರತಿವರ್ಷ 25000 ಮಕ್ಕಳು ಕುರುಡರಾಗುತ್ತಿದ್ದಾರೆ. (ಒಂದು ಮಗುವಿಗೆ ಕೇವಲ 6 ಪೈಸೆ ಖರ್ಚು ಮಾಡಿದರೆ ಮಗು ಅಂಧವಾಗುವುದನ್ನು ತಪ್ಪಿಸಲು ಸಾಧ್ಯವಿದೆ)

14ವರ್ಷಕ್ಕಿಂತ ಚಿಕ್ಕವಯಸ್ಸಿನ ಮಕ್ಕಳನ್ನು ಫ್ಯಾಕ್ಟರಿಯಲ್ಲಾಗಲೀ, ಇನ್ನಿತರ ಕಡೆ ಕೆಲಸಕ್ಕೆ ನೇಮಿಸಿಕೊಳ್ಳತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ಲಿಖಿತವಿದೆ. ಆದರೆ ನಮ್ಮ ಮಹಾನ್ ದೇಶದಲ್ಲಿ 11ಲಕ್ಷ (14ವಯಸ್ಸಿಗಿಂತ ಚಿಕ್ಕವರು) ಮಕ್ಕಳು ಟೀ ಅಂಗಡಿ, ಫ್ಯಾಕ್ಟರಿ, ಸಾಹೇಬರ ಮನೆಗಳಲ್ಲಿ... ಕೆಲಸ ಮಾಡುತ್ತಿದ್ದಾರೆ. ಬೃಹತ್ ಬೆಂಕಿಕಡ್ಡಿ ಉದ್ಯಮನಗರವಾದ ಮದ್ರಾಸಿನ ಶಿವಕಾಶಿಯಲ್ಲಿ 5-6ವಯಸ್ಸಿನ ಮಕ್ಕಳೂ 12–14ಘಂಟೆ ಕೆಲಸ ಮಾಡುತ್ತಿವೆ. ಶಿವಕಾಶಿಯಲ್ಲಿ ಒಟ್ಟು ಕಾರ್ಮಿಕರ ಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮಕ್ಕಳೇ. ನರಕವೆಂಬುದನ್ನು ನೋಡಬೇಕೆಂದಿದ್ದರೆ ಶಿವಕಾಸಿಗೆ ಭೇಟಿ ಅಗತ್ಯ.

ತಂದೆ ತಾಯಿಗಳಿಂದ ತಿರಸ್ಕರಿಸಲ್ಪಟ್ಟು (ಅಕ್ರಮ ಸಂಬಂಧಗಳಿಂದ ಜನಿಸಿದ) ಅನಾಥರಾದ ಮಕ್ಕಳ ಸಂಖ್ಯೆ 1.5ಮಿಲಿಯ. ಉಭಯ ಭ್ರಷ್ಟರಾದ ಈ ಮಕ್ಕಳ ಭವಿಷ್ಯ ಅಂಧಕಾರ.

ಇಂಜಿನೀಯರರಾಗಿ, ವೈದ್ಯರಾಗಿ, ಶಿಕ್ಷಕರಾಗಿ ಸೇವೆಸಲ್ಲಿಸಬೇಕಾಗಿದ್ದ ಈ ಸಹಸ್ರಸಹಸ್ರ ಮಕ್ಕಳು ಕುಖ್ಯಾತ ಅಪರಾಧಿಗಳಾಗುತ್ತಿದ್ದಾರೆ, ಸಮಾಜಘಾತಕರಾಗುತ್ತಿದ್ದಾರೆ. ಪ್ರೀತಿ, ಅನುಕಂಪ, ಸಹಾನುಭೂತಿ...ಈ ಯಾವ ಭಾವನೆಗಳನ್ನೂ ಅನುಭವಿಸದ ಈ ಪುಟ್ಟ ಮಕ್ಕಳು ಸಮಾಜದ ನಿರ್ಲಕ್ಷ್ಯತನದಿಂದ ಅತಿ ಹೀನ ಬದುಕನ್ನು ಬದುಕುತ್ತಿದ್ದಾರೆ.

ತಾಯಿಯ ಮಧುರ ಅಪ್ಪುಗೆಯಿಂದ, ಒಂದು ಚೂರು ಹಾಲಿನಿಂದ, ಒಂದು ಚೂರು ಬಟ್ಟೆಯಿಂದ ವಂಚಿತರಾಗಿ ಬೆಳೆಯುತ್ತಿರುವ ಈ ಸಹಸ್ರಸಹಸ್ರ ಮೊಗ್ಗುಗಳಿಗೆ ಪುನಃ ಜನ್ಮ ನೀಡಲು ಸಾಧ್ಯವಾ? ಹಸಿವಿನಿಂದ ಕಂಗೆಟ್ಟು ಕಣ್ಣೀರಿಡುವ ಈ ಕಂದಮ್ಮಗಳ ಕಣ್ಣೀರು ಒರೆಸಲು ಸಾಧ್ಯವಾ ? ಅರಳುವ ಮುನ್ನವೇ ಉದುರಿಹೋಗುವ ಈ ಮೊಗ್ಗುಗಳನ್ನು ಉಳಿಸಲು ಸಾಧ್ಯವಾ ? ತುತ್ತು ಅನ್ನಕ್ಕಾಗಿ ಮೈಲುಗಟ್ಟಲೇ ಒಂದು ತೊಟ್ಟಿಯಿಂದ ಇನ್ನೊಂದು ತೊಟ್ಟಿಯುವರೆಗೆ ಬಿಸಿಲಲ್ಲಿ-ಮಳೆಯಲ್ಲಿ ಅಲೆಯುವುದನ್ನು ತಪ್ಪಿಸಲು ಸಾಧ್ಯವಾ ? ಭಯಂಕರ ಚಳಿಯಲ್ಲಿ ಹೊದೆಯಲು ಇಲ್ಲದೇ ತಲೆಯನ್ನು ಕಾಲಸಂದಿಯಲ್ಲಿ ಸಿಕ್ಕಿಸಿಕೊಂಡು ಅಂಗಡಿಗಳೆದುರು ಬಿದ್ದಿರುವ ಈ ಮುಗ್ಧ ಮಕ್ಕಳಿಗೆ ಸೂರು ಒದಗಿಸಲು ಸಾಧ್ಯವಾ ?

ಖಂಡಿತ ಸಾಧ್ಯವಿದೆ. ಮಕ್ಕಳ ಕುರಿತು ಚರ್ಚಾಗೋಷ್ಠಿ (ಕಳೆದ ಅಂತರ್ರಾಷ್ಟ್ರೀಯ ಮಕ್ಕಳ ವರ್ಷ) ಯನ್ನೇರ್ಪಡಿಸುವದರಿಂದಲ್ಲ. ಮಕ್ಕಳ ಸಂಖ್ಯೆಗಳ ಕುರಿತು ಭಾಷಣಗಳನ್ನೇರ್ಪಡಿಸುವುದರಿಂದಲ್ಲ.

ಈ ಭ್ರಷ್ಟ, ಕೊಳೆತು ನಾರುತ್ತಿರುವ ವ್ಯವಸ್ಥೆಯನ್ನು ಬದಲಾಯಿಸಿದಾಗ ಮಾತ್ರ ಸಹಸ್ರಾರು ಹೂಗಳು ಅರಳುತ್ತವೆ.

ನಾವು ಆ ದಿಶೆಯಲ್ಲಿ ಮುನ್ನಡೆಯೋಣ.

—ವಿ. ಪಿ. ಕೆ.

ಕೇಂದ್ರ ಸಮಿತಿಯ ನಿರ್ಣಯಗಳು

(1ನೇ ಪುಟದಿಂದ)

ಳಿಯರ ಶಾಂತಿ ಯಾತ್ರೆ ಹಾಗೂ ಯುದ್ಧ ಪ್ರಕ್ರಿಯೆಯನ್ನು ವಿರೋಧಿಸಬೇಕೆಂಬ ಕಾರ್ಮಿಕ ವರ್ಗದ ನಿರ್ಧಾರ ಇವೆಲ್ಲಾ ಆಕ್ರಮಣಕಾರರ ಮೇಲೆ ತನ್ನ ಅಭೀಷ್ಟೆಯೇ ಗೆಲ್ಲುವಂತೆ ಮಾಡುವುದು ಸಾಧ್ಯ. ಬರಲಿರುವ ಭಾರೀ ವಿಪತ್ತನ್ನು ನಮ್ಮ ಕಾಲದ ಶಾಂತಿ ಚಳುವಳಿ ತಡೆಯಬಲ್ಲದು.

ಕಾರ್ಮಿಕವರ್ಗ ಹಾಗೂ ಪ್ರಗತಿಪರ ವಿಭಾಗಗಳು ತಕ್ಷಣ ಈ ಅಪಾಯವನ್ನೆದುರಿಸಿ, ಸಾಮ್ರಾಜ್ಯಶಾಹೀ ಯೋಜನೆಗಳನ್ನು ಜನತೆಯೆದುರು ಬಯಲುಗೊಳಿಸಿ, ಜಗತ್ತನ್ನು ಅಣು ವಿಧ್ವಂಸದಿಂದ ರಕ್ಷಿಸಲು ಎಲ್ಲಾ ಸಾಮ್ರಾಜ್ಯಶಾಹಿ–ವಿರೋಧಿ ಶಾಂತಿಪ್ರಿಯ ಶಕ್ತಿಗಳನ್ನು ಒಟ್ಟು ಸೇರಿಸಬೇಕೆಂದು ಸಿ. ಪಿ. ಐ. (ಎಂ) ಭಾವಿಸುತ್ತದೆ.

ಅಸ್ಸಾಂ ಪರಿಸ್ಥಿತಿ

"ವಿದೇಶೀ ನಾಗರಿಕರ" ವಿವಾದದ ಬಗ್ಗೆ ಭಾರತ ಸರಕಾರ ಹಾಗೂ ಅಸ್ಸಾಂ ಚಳವಳಿಯ ನಾಯಕರ ನಡುವೆ ನಡೆಯುತ್ತಿದ್ದ ದೀರ್ಘಾವಧಿಯ ಮಾತುಕತೆಗಳು ಮುರಿದು ಬಿದ್ದಂತೆಯೇ ಎಂಬುದನ್ನು ಕೇಂದ್ರ ಸಮಿತಿ ಗಮನಿಸಿದೆ. ಇತ್ತೀಚೆಗೆ ಅಸ್ಸಾಂ ಚಳುವಳಿಗಾರರು ಸಲ್ಲಿಸಿದ 15 ಅಂಶದ ಸೂಚನೆಗಳಿಂದ ಇದು ಸ್ಪಷ್ಟವಾಗುತ್ತದೆ. ವರ್ಷಪೂರ್ತಿ ನಡೆದ ಮಾತುಕತೆಗಳ ನಂತರವೂ ದೇಶದ ಸಮಗ್ರತೆಗೆ ಮಾರಕವಾದ ತಮ್ಮ ವಿಚ್ಛಿದ್ರಕಾರೀ ನಿಲುವನ್ನು ಅವರು ಬಿಟ್ಟುಕೊಟ್ಟಿಲ್ಲ.

'ವಿದೇಶೀ ನಾಗರಿಕರ' ವಿವಾದದಲ್ಲಿ 1971ನ್ನು ಬೇರ್ಪಾಟಿನ ವರ್ಷವೆಂದು ಪರಿಗಣಿಸಬೇಕೆಂದು ಮೊದಲ ಅಖಿಲ ಪಕ್ಷ ಸಭೆಯಲ್ಲಿ ಏರ್ಪಟ್ಟ ಒಮ್ಮತಾಭಿಪ್ರಾಯವನ್ನು ಸಿ.ಪಿ.ಐ.(ಎಂ) ಸತತವಾಗಿ ಹೇಳುತ್ತಾ ಬಂದಿದೆ. ಈಗಲೂ ಅದನ್ನೇ ಹೇಳುತ್ತದೆ. ಭಾರತ ಸರಕಾರ 1961–71ರ ಅವಧಿಯ ಮತ್ತೆ ಚರ್ಚಿಸಬಹುದೆಂದು ಸೂಚನೆಯಿತ್ತಿದೆಯೆಂದು ಪತ್ರಿಕಾ ವರದಿಗಳು ಹೇಳುತ್ತಿವೆ. ಇದು ಹಾನಿಕರ. ಯಾಕೆಂದರೆ ವಿಚ್ಛಿದ್ರಕಾರೀ ಶಕ್ತಿಗಳು ಇದನ್ನು ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಲು ಉಪಯೋಗಿಸಿಕೊಳ್ಳುತ್ತವೆ. ಇದೇ ರೀತಿ ಒಂದು ಅಲ್ಪಸಂಖ್ಯಾತ ಕಾಂಗ್ರೆಸ್ (ಐ) ಸರಕಾರ ಹೇರುವ ಸದ್ಯದ ಪ್ರಯತ್ನಗಳೂ ಇಂತಹ ಅಪಾಯಕಾರೀ ಧೋರಣೆಯ ಒಂದು ಅಂಗ. ಇವೆಲ್ಲಾ ಸಮಸ್ಯೆಯನ್ನು ಪರಿಹರಿಸುವ ಬದಲು ವಿಘಟನಾಕಾರಿಗಳ ಕೈ ಬಲಪಡಿಸುತ್ತವೆಯಷ್ಟೆ.

ಇಂತಹ ಸಂದರ್ಭದಲ್ಲಿ ಜನತಾ ಪಕ್ಷ, ಕಾಂಗೆಸ್ (ಎಸ್), ಲೋಕದಳದಂತಹ ಪಕ್ಷಗಳು ಸಿ ಪಿ ಐ.(ಎಂ) ಮತ್ತು ಇತರ ಎಡಪಕ್ಷಗಳಂತೆ ಕಾಂಗ್ರೆಸ್ (ಐ) ನ ಅಲ್ಪಸಂಖ್ಯಾತ ಸರಕಾರ ಹೇರುವುದನ್ನು ವಿರೋಧಿಸುತ್ತಿವೆ. ಈ ಪಕ್ಷಗಳು ಅಸ್ಸಾಂನಲ್ಲಿ ಕಾಂಗ್ರೆಸ್ಸೇತರ ಸರಕಾರ ರಚಿಸಲು ಸಿ. ಪಿ. ಐ. (ಎಂ)ನ ಬೆಂಬಲ ಕೇಳಿವೆ. ವಿಘಟನಾಕಾರೀ ಚಳುವಳಿಯ ಬಗ್ಗೆ ಒಂದು ಸ್ಪಷ್ಟ ನಿಲುವುತಾಳಬೇಕೆಂದು ಸಿ. ಪಿ. ಐ. (ಎಂ) ಅವರನ್ನು ಕೇಳುತ್ತದೆ. 'ವಿದೇಶೀ ನಾಗರಿಕರ' ವಿವಾದಕ್ಕೆ ನ್ಯಾಯಪೂರ್ಣ ಪರಿಹಾರ ಕಂಡುಹಿಡಿಯುವ ಪ್ರಮುಖ ಗುರಿಯನ್ನು ಸಾಧಿಸದ ಸರಕಾರ ಹಿಂದಿನ ಸರಕಾರಗಳಂತೆಯೇ ನಿರುಪಯೋಗಿ.

ಅಸ್ಸಾಂನಲ್ಲಿ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಹೆಚ್ಚುತ್ತಿರುವ ಐಕ್ಯ ಹಾಗೂ ತಿಳುವಳಿಕೆಯನ್ನು ಕೇಂದ್ರ ಸಮಿತಿ ಸ್ವಾಗತಿಸುತ್ತದೆ. ಸರಕಾರದ ರಾಜೀ ಸೂಚನೆಗಳು ಅಲ್ಪಸಂಖ್ಯಾತರಿಗೆ ಕೆಡುಕನ್ನುಂಟುಮಾಡಬಹುದೆಂಬುದರ ಬಗ್ಗೆ ತಿಳಿದಿರಬೇಕೆಂದು ಹಾಗೂ ರಾಜ್ಯದಲ್ಲಿ ವಿವಿಧ ವಿಭಾಗಗಳ ಒಗ್ಗಟ್ಟು ಮುರಿಯದಂತೆ ಎಲ್ಲಾ ಪ್ರಯತ್ನ ನಡೆಸಬೇಕೆಂದು ಅಸ್ಸಾಂ ಜನತೆಗೆ ಕೇಂದ್ರ ಸಮಿತಿ ಮನವಿ ಮಾಡಿಕೊಳ್ಳುತ್ತದೆ.

ಪಂಜಾಬ್ ಬೆಳವಣಿಗೆಗಳು

ಖಲೀಸ್ತಾನ ಬಾವುಟದಡಿ ನಡೆಯುತ್ತಿರುವ ಪ್ರತ್ಯೇಕತಾವಾದಿ ಚಳುವಳಿಯ ಬೆಳವಣಿಗೆ ಹಾಗೂ ಪರಿಣಾಮವಾಗಿ ಪಂಜಾಬಿನಲ್ಲಿ ಹರಡಿದ ಕೋಮು ಅಶಾಂತಿ ಹಾಗೂ ರಾಜ್ಯದ ಪ್ರಜಾಸತ್ತಾತ್ಮಕ ಚಳವಳಿಗೆ ಇದರಿಂದ ಉಂಟಾಗಿರುವ ಬೆದರಿಕೆಯ ಬಗ್ಗೆ ಕೇಂದ್ರ ಸಮಿತಿ ತನ್ನ ಅತೀವ ಕಳವಳ ವ್ಯಕ್ತಪಡಿಸಿದೆ.

ಒಬ್ಬ ಅಮೇರಿಕನ್ ನಾಗರಿಕನಿಂದ ಆರಂಭವಾಗಿ ಅಕಾಲಿ ಪಕ್ಷದ ಒಂದು ವಿಭಾಗದಿಂದ ಹಾಗೂ ಪ್ರಮುಖ ಅಕಾಲೀ ಸಂಘಟನೆಗಳಿಂದ ಸಹಾನುಭೂತಿ ಪಡೆದ ಈ ಚಳವಳಿಯ ತೀವ್ರವಾದಿಗಳಿಗೆ ದಿಲ್ಲೀ ಗುರುದ್ವಾರ ಸಮಿತಿಯ ವ್ಯವಹಾರಗಳಲ್ಲಿ ಕೇಂದ್ರ ಸರಕಾರ ಕಾಂಗ್ರೆಸ್ (ಐ) ಗೆ ಅನುಕೂಲಮಾಡಿಕೊಡಲು ಹಸ್ತಕ್ಷೇಪ ಮಾಡಿ ಉತ್ತಮ ಅವಕಾಶ ಕಲ್ಪಿಸಿಕೊಟ್ಟಂತಾಯಿತು. ನಂತರ ಪ್ರಖ್ಯಾತ ಪತ್ರಿಕಾಕರ್ತ ಲಾಲಾ ಜಗತ್ ನಾರಾಯಣರ ಕೊಲೆ, ಅವರ ಕೊಲೆಗಡುಕರನ್ನು ಹಿಡಿಯುವುದರಲ್ಲಿ ಪಂಜಾಬ್ ಸರಕಾರದ ವಿಫಲತೆ, ಸೆರೆಹಿಡಿದ ಮೇಲೂ ಅವರನ್ನು ಬಿಡುಗಡೆ ಮಾಡಿದ ರೀತಿ, ಚಾಂದೋವಾ ಕಾಲನ್ ಮತ್ತು ಚೌಕ್‌ಮಹಲ್‌ನಲ್ಲಿ ಅನಗತ್ಯ ಗೋಳೀಬಾರು ಇವೆಲ್ಲದರಿಂದಾಗಿ ರಾಜ್ಯದಲ್ಲಿ ಕೋಮು ಅಶಾಂತಿ ಹರಡಲಾರಂಭಿಸಿತು.

ನಮ್ಮ ಪಕ್ಷದ ರಾಜ್ಯ ಘಟಕ ಈ ವಿಷಯದಲ್ಲಿ ಒಂದು ಸ್ಪಷ್ಟ ನಿಲುವನ್ನು ತಳೆದು ಖಲೀಸ್ತಾನ್‌ನ ಪ್ರತ್ಯೇಕತಾವಾದಿ ಚಳವಳಿಯಿಂದ ದೂರವಿರಬೇಕೆಂದು ಎಲ್ಲ ಪ್ರಜಾಪ್ರಭುತ್ವವಾದಿ ಅಕಾಲಿಗಳಿಗೆ ಕರೆಕೊಟ್ಟಿತು. ಪಂಜಾಬ್ ಸರಕಾರ ನಡೆಸಿದ ಅನಗತ್ಯ ಗೋಲೀಬಾರನ್ನು ಖಂಡಿಸಿ ಅಕಾಲಿಗಳ ನ್ಯಾಯಪೂರ್ಣ ಬೇಡಿಕೆಗಳನ್ನು ಮನ್ನಿಸಲು ಕೇಂದ್ರ ಸರಕಾರಕ್ಕೆ ಕರೆನೀಡಿತು. ಅಕಾಲಿಗಳಿಗೂ 'ಧರ್ಮಯುದ್ಧ' ಆರಂಭಿಸಬಾರದೆಂದು ವಿನಂತಿ ಮಾಡಿಕೊಂಡಿತು.

ಅಕಾಲಿಗಳ (ಲೋಂಗೋವಾಲ್) ಹಾಗೂ ಕೇಂದ್ರ ಸರಕಾರದ ನಡುವೆ ಮಾತುಕತೆ ನಡೆದಿರುವುದರ ಬಗ್ಗೆ ಕೇಂದ್ರ ಸಮಿತಿ ತನ್ನ ಸಮಾಧಾನ ವ್ಯಕ್ತಪಡಿಸಿದೆ. ಅಕಾಲಿಗಳು ಸಿಖ್ಖರು ಧಾರ್ಮಿಕ ಬೇಡಿಕೆಗಳು ಹಾಗೂ ಪಂಜಾಬೀ ಜನತೆಯ ರಾಜಕೀಯ ಮತ್ತು ಆರ್ಥಿಕ ಬೇಡಿಕೆಗಳು ಇವೆರಡನ್ನೂ ಬೇರೆಬೇರೆಯೆಂದು ಗುರುತಿಸಬೇಕು. ರಾಜಕೀಯದೊಂದಿಗೆ ಧರ್ಮವನ್ನು ಬೆರೆಸಬಾರದು ಎಂಬ ತನ್ನ ನಿಲುವನ್ನು ಮತ್ತೆ ವ್ಯಕ್ತಪಡಿಸಿದೆ. ಪಂಜಾಬಿನ ಎಲ್ಲಾ ಪ್ರಜಾಪ್ರಭುತ್ವವಾದೀ ಜನತೆ ಸಾಮ್ರಾಜ್ಯಶಾಹಿಗಳ ಪ್ರೇರಣೆಯಿಂದ ನಡೆಯುತ್ತಿರುವ ಪ್ರತ್ಯೇಕತಾವಾದಿ ಚಳುವಳಿಗೆ ಯಾವ ಎಡೆಯನ್ನೂ ಕೊಡಬಾರದೆಂದೂ. ಪ್ರಜಾಪ್ರಭುತ್ವವಾದೀ ಚಳುವಳಿಯನ್ನು ಒಡೆಯಬೇಕೆಂಬ ಉದ್ದೇಶ ಹೊಂದಿರುವ ಎಲ್ಲಾ ಕೋಮುಗಳ ಕೋಮುವಾದಿಗಳನ್ನೂ ವಿರೋಧಿಸಬೇಕೆಂದೂ ಮನವಿಮಾಡಿಕೊಂಡಿದೆ. ಅದೇ ರೀತಿ ದೇಶದ ಸಮಸ್ತ ಜನತೆಗೆ ಖಲೀಸ್ತಾನದ ಘೋಷಣೆಯ ಅಪಾಯವನ್ನು ಮನಗಂಡು ಅದನ್ನು ಸೋಲಿಸಲು ಎಲ್ಲಾ ಪ್ರಯತ್ನ ನಡೆಸಬೇಕೆಂದು ಕೇಳಿಕೊಂಡಿದೆ.

●

ಬಸ್‌ದರ ಏರಿಕೆಗೆ ಪ್ರತಿಭಟನೆ

ನವೆಂಬರ್ 10ರಿಂದ ಸಿಟಿಬಸ್ ದರವನ್ನು ಹೆಚ್ಚಿಸಿದ ಬಸ್ ಮಾಲೀಕರ ಸಂಘದ ಏಕಪಕ್ಷೀಯ ತೀರ್ಮಾನವನ್ನು ಎಸ್. ಎಫ್. ಐ. ಮಂಗಳೂರು ತಾಲ್ಲೂಕು ಸಮಿತಿ ತೀವ್ರವಾಗಿ ಖಂಡಿಸಿದೆ. ಇತ್ತೀಚಿನ ವರ್ಷಗಳಲ್ಲಿ ಹಲವಾರು ಬಾರಿ ಬಸ್‌ದರವನ್ನು ಹೆಚ್ಚಿಸಲಾಗಿದೆ. ಈ ಸುಲಿಗೆಯನ್ನು ಕೂಡಲೇ ನಿಲ್ಲಿಸದಿದ್ದರೆ ತೀವ್ರಕ್ರಮ ಎದುರಿಸಬೇಕಾದೀತೆಂದು ಎಸ್. ಎಫ್. ಐ. ಎಚ್ಚರಿಸಿದೆ.

●

ಸಂಪಾದಕೀಯ

(1ನೇ ಪುಟದಿಂದ)

ನೇಮಕಗೊಂಡ ಮೇಯರ್, ಉಪ ಮೇಯರ್ ಮುಂತಾದವರನ್ನು ಪ್ರದರ್ಶಿಸುವುದು ಹಾಸ್ಯಾಸ್ಪದವಾಗಿದೆ. ಯಾವ ರಾಜ್ಯದಲ್ಲೂ ಇದನ್ನು ಮಾಡಿಲ್ಲ. ಚುನಾವಣೆ ನಡೆಸುವ ಯೋಗ್ಯತೆ ಇಲ್ಲದಿದ್ದರೆ ಬೇಡ. ಅಧಿಕಾರಿಗಳೇ ಮುಂದುವರಿಯಲಿ. ನೇಮಕಗೊಂಡ ನಗರಸಭೆಗಳು ಬೇಡ. ಇದಕ್ಕೆ ಅವಕಾಶಕೊಟ್ಟಲ್ಲಿ ಮುಂದೆ ಶಾಸನಸಭೆಗೂ ಇದು ಅನ್ವಯವಾಗುವುದು. ಈ ಕ್ರಮ ಪ್ರಜಾಪ್ರಭುತ್ವಕ್ಕೆ ಬಂದ ಸವಾಲು. ಇದನ್ನು ವಿರೋಧಿಸಲೇಬೇಕು. ನಮಗೆ ಈ ಪೊಳ್ಳು ಸಭೆಗಳು ಬೇಡ. ಚುನಾಯಿತ ಸಭೆಗಳು ಬರಲಿ. ಚುನಾವಣೆ ನಡೆಯಲೆಂಬ ಬೇಡಿಕೆಗೆ ತೀವ್ರ ಚಳುವಳಿಬೇಕು. ಸರಕಾರದ ಈ ನಾಟಕ ಸಾಕು. ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಈಗ ಹೋರಾಡುವುದಗತ್ಯ.

○

ಕೃಷಿಕೂಲಿಕಾರರ ಮೇಲೆ ದಬ್ಬಾಳಿಕೆ

(1ನೇ ಪುಟದಿಂದ)

ಸ್ಥರು ಪೋಲೀಸರ ಈ ಕೃತ್ಯವನ್ನು ಪ್ರತಿಭಟಿಸಿ ಘೋಷಣೆ ಕೂಗಿದರು. ಇದನ್ನೇ ಕಾಯುತ್ತಿದ್ದ ಆ ಪೋಲೀಸ್ ಪಡೆ ತಾಂಡವನೃತ್ಯ ಆರಂಭಿಸಿತು. ತಾವು ಬಂಧಿಸಿದ ಬಂಧಿಗಳ ಮೇಲೆ ಗುಂಡುಹಾರಿಸಿ ನಾಲ್ವರನ್ನು ಕೊಂದರು. ಗ್ರಾಮಸ್ಥರ ಮೇಲೆ ಲಾಠೀಪ್ರಹಾರವಾಯಿತು. ಲಾಠೀ ಹಿಡಿದ ಆ ಕ್ರೂರಹಸ್ತಗಳಿಗೆ ಮಕ್ಕಳು ಹೆಂಗಸರು-ಮುದುಕರು ಈ ಬೇಧಭಾವವೇ ಇರಲಿಲ್ಲ. ಈ ಕಾರ್ಯಾಚರಣೆಯಲ್ಲಿ ಅತ್ಯಂತ ದಾರುಣವಾದುದೆಂದರೆ 15 ವಯಸ್ಸಿನ ಚಂದ್ರಾವತಿ ಎಂಬ ಬಾಲಕಿಯ ಕೊಲೆ. ಪೋಲೀಸರು ಬಂಧಿಸಿದವರಲ್ಲಿ ಚಂದ್ರಾವತಿಯ ಚಿಕ್ಕಪ್ಪ ಮತ್ತು ಸೋದರ ಇದ್ದರು. ಮುಗ್ಧ ಚಂದ್ರಾವತಿ ದರೋಗಾ (ದಫೇದಾರ)ನ ಕಾಲ ಮೇಲೆ ಬಿದ್ದು ಅವರಿಬ್ಬರನ್ನೂ ಬಿಟ್ಟುಬಿಡುವಂತೆ ಕೇಳಿಕೊಂಡಳು. ಆ ಮದೋನ್ಮತ್ತ ದಫೇದಾರನು ಆ ಬಾಲಕಿಯನ್ನು ಬೂಟುಕಾಲಿನಿಂದ ಒದೆದು ಗುಂಡುಹಾರಿಸಿ ಕೊಂದನು. ಪೋಲೀಸರು–ಸರಕಾರ ಏನು ಕತೆ ಕಟ್ಟಿದ್ದಾರೆ ಗೊತ್ತೇ? ಚಂದ್ರಾವತಿ ಪೋಲೀಸ್ ಪಡೆಗಳ ಮೇಲೆ ಬಾಂಬ್ ಬೀಸಾಕಿದ್ದಳು. ಆಗ ನಡೆದ ಘರ್ಷಣೆಯಲ್ಲಿ ಅವಳು ನಿಧನಳಾಗಿದ್ದಾಳೆ. ಬೆದರಿದ ಗ್ರಾಮಸ್ಥರನ್ನು ಹಿಡಿದು ವಾಹನಗಳಲ್ಲಿ ತುಂಬಿಕೊಂಡು ಪೋಲೀಸರು ಹೊರಟುಹೋದರು. ಪಿಲಹಿಯಲ್ಲೀಗ ಸ್ಮಶಾನ ಶಾಂತಿ ನೆಲೆಸಿದೆ. ಅಲ್ಲಲ್ಲಿ ಚದುರಿಬಿದ್ದ ರಕ್ತದ ಕಲೆಗಳು ಪೋಲೀಸರ ದೌರ್ಜನ್ಯಕ್ಕೆ ಮೂಕ ಸಾಕ್ಷಿಯಾಗಿ ನಿಂತಿವೆ.

ಬಿಕ್ರಮ್, ಮಸೌರಿ, ಸೌಬತ್‌ಪುರ, ಧನರುವಾ ಬ್ಲಾಕ್‌ಗಳ 20 ಗ್ರಾಮಗಳಲ್ಲೂ ಇದೇ ರೀತಿಯ ಕಾರ್ಯಾಚರಣೆಯನ್ನು ಪೋಲೀಸ್ ಪಡೆ ನಡೆಸಿದೆ. ದಿನಬೆಳಗಾದರೆ ಹರಿಜನರ ಕುರಿತು ಮೊಸಳೆಕಣ್ಣೀರು ಸುರಿಸುವ ಕಾಂಗೈನ ಜನ ಬಿಹಾರ್‌ನ ಹರಿಜನ ಕೃಷಿಕೂಲಿಕಾರರನ್ನು ನಡೆಸಿಕೊಂಡ ರೀತಿ ಇದು.

ಇನ್ನೊಂದು ಘಟನೆ :

ಅಕ್ಟೋಬರ್ 22ರಂದು ಬಿಕ್ರಮ್ ನಗರದಲ್ಲಿ ಪಾಟ್ನಾ ಜಿಲ್ಲೆಯ ವಿವಿಧ ಬ್ಲಾಕ್‌ಗಳಿಗೆ ಸೇರಿದ ಸುಮಾರು 12000 ಜಮೀನ್ದಾರರು ಶಸ್ತ್ರಸಜ್ಜಿತರಾಗಿ ಮೆರವಣಿಗೆ ನಡೆಸಿದರು. ಈ ಕಳ್ಳರಿಗೆ ಪೋಲೀಸರ ಬೆಂಗಾವಲು ಬೇರೆ! ಜಮೀನ್ದಾರರು "ಭೂಮಿ ಸೇನಾ" ಎಂಬ ಸಂಘಟನೆಯನ್ನು ಪ್ರಾರಂಭಿಸಿಕೊಂಡಿದ್ದಾರೆ. ಕುದುರೆ-ಆನೆ–ಖಡ್ಗ-ಬಂದೂಕು ಇವೆಲ್ಲ ಮೆರವಣಿಗೆಯಲ್ಲಿ ವಿಜೃಂಭಿಸಿದವು. "ನಮ್ಮನ್ನು ಎದುರಿಸಿದರೆ ಘೋರ ಪರಿಣಾಮ ಕಾದಿದೆ", "ಕೂಲಿಕಾರರ ಗುಡಿಸಲುಗಳಿಗೆ ಬೆಂಕಿ ಹಚ್ಚುತ್ತೇವೆ" ಇತ್ಯಾದಿ ಇತ್ಯಾದಿ ಘೋಷಣೆ ಮೊಳಗಿದವು.

ಅಕ್ಟೋಬರ್ 23 ಮತ್ತು 24 ಈ ಎರಡು ದಿನ ನಡೆದ ಪೋಲೀಸ್ ಕಾರ್ಯಾಚರಣೆಯಲ್ಲಿ ಕನಿಷ್ಟ 12 ಜನರು ಸತ್ತು ನೂರಾರು ಜನ ಗಾಯಗೊಂಡಿದ್ದಾರೆಂದು ಟೈಮ್ಸ್ ಆಫ್ ಇಂಡಿಯಾ ವರದಿಮಾಡಿದೆ. ಬಿಕ್ರಮ್‌ಗೆ ಕರೆ ತಂದ ಗಾಯಾಳುಗಳನ್ನು ಯಾವ ವೈದ್ಯನೂ ಇದುವರೆಗೂ ಪರೀಕ್ಷಿಸಿಲ್ಲ.

ತಮ್ಮ ಗೌರವ, ಹಕ್ಕುಗಳಿಗೋಸ್ಕರ ಸಿಡಿದೆದ್ದು ನಿಂತಿರುವ ಈ ಹರಿಜನರು ಕೃಷಿಕೂಲಿಕಾರರು ಮಾಡಿದ ದೊಡ್ಡ ಅಪರಾಧವೆಂದರೆ ಅವರು ಸಂಘಟಿತರಾಗಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದು.

ಮಾನ್ಯ ಜಗನ್ನಾಥ ಮಿಶ್ರಾ ಅವರೇ! ತೋಳ್ಬಲದಿಂದ ಸಂಘಟನೆಯನ್ನು ಹತ್ತಿಕ್ಕುವ ಮೂರ್ಖತನ ಬೇಡ. ನಾಳೆ ಆ ಬಂದೂಕೇ ನಿಮಗೆ ತಿರುಗಿ ಬಿದ್ದೀತು.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT